ಹೊರನಾಡ ಚಿಲುಮೆ

ಕಾಂಗರುನಾಡಿನ ಕನ್ನಡಿಗರಿಂದ ವಿಶ್ವ ಕನ್ನಡಿಗರ ಹೃದಯಕ್ಕೆ

ಆಸ್ಟ್ರೇಲಿಯಾದ ಮೊಟ್ಟಮೊದಲ ಕನ್ನಡ ಇ-ಮಾಸಪತ್ರಿಕೆ | Chilume Circulated in and around 10 countries | ಸಂಚಿಕೆ ೭, ಡಿಸೆಂಬರ್ 2013

ಕ್ರಿಸ್ಮಸ್ ಹಬ್ಬದ ಶುಭಾಶಯಗಳು

"ಸಾಂಟಾ" ನ ನಗುವಿನ "ಚಿಲುಮೆ" ನಮ್ಮೆಲ್ಲರಿಗೂ ಸಂತಸ ತರಲಿ

Find us on: facebook

ಹೊರನಾಡ ಚಿಲುಮೆ ಇ-ಮಾಸ ಪತ್ರಿಕೆಯ ಓದುಗರಿಗೆಂದು ತೆರೆಯಲಾಗಿರುವ ಫೇಸ್ಬುಕ್ ಗುಂಪು ಸೇರಿಕೊಳ್ಳಲು ಕೆಳಗಿನ ಲಿಂಕ್ ಕ್ಲಿಕ್ ಮಾಡಿ

JOIN CHILUME FACEBOOK GROUP (You have to be logged in to facebook to join)

ಚಿಲುಮೆಯ ಒಳಗೆ

ರಿಚರ್ಡ್ ಹಾಸ್ಯಸಂಜೆ - ವರದಿ ... ಪು. ೧
ಸಂಪಾದಕೀಯ ... ಪು. ೨
ಮಾಸ್ಟರ್ ಹಿರಣ್ಣಯ್ಯ ಲೇಖನ ... ಪು. ೩

ಚಿಲುಮೆಯ ಒಳಗೆ

ಆರೋಗ್ಯ ... ಪು. ೬
ರಾಂ ರಾಮ! ಹಾಸ್ಯ ... ಪು. ೭
ಕಥಾ ಚಿಲುಮೆ ... ಪು. ೧೦

ಚಿಲುಮೆಯ ಒಳಗೆ

ರೆಸಿಪಿ ಕೊಡ್ತೀರಾ! ... ಪು. ೧೦
ಕಾವ್ಯ ಚಿಲುಮೆ ... ಪು. ೧೧
ಹಾಸ್ಯ ಚಿಲುಮೆ ... ಪು. ೧೧

ಚಿಲುಮೆಯ ಒಳಗೆ

ಸಂತ-ಸಾಂಟಾ (ಹಾಸ್ಯ) ... ಪು. ೧೨
ಪದ ಪುಂಜ ... ಪು. ೧೩
ರಂಗೋಲಿ ... ಪು. ೧೩

ಚಿಲುಮೆಯ ಒಳಗೆ

ಸೈಕಲ್ ಪಯಣ ... ಪು. ೧೪
ಛಾಯಾ ಚಿಲುಮೆ ... ಪು. ೧೬
ವಿಜ್ಞಾನ, ಅಲ್ಲಲ್ಲಿ ಏನೇನು ... ಪು. ೧೭

ಚಿಲುಮೆಯ ಒಳಗೆ

CM ಗೊಂದು ಬಹಿರಂಗ ಪತ್ರ
ಮಾಸ್ಟರ್ ಹಿರಣ್ಣಯ್ಯ ಅವರಿಂದ
ಪುಟ ೫ ರಲ್ಲಿ

ಈಗಿನ ಸುದ್ದಿ

ಸಿಡ್ನಿಯಲ್ಲಿ ದಸರಾ ಮತ್ತು ಕರ್ನಾಟಕ ರಾಜ್ಯೋತ್ಸವ

"ಅಲ್ಲ, ಸಿಡ್ನಿನಲ್ಲಿ ಎಲ್ಲಾದರು ಕಾರ್ ಪಾರ್ಕ್ ಮಾಡಿದ್ರೆ $20 ಕೊಡಬೇಕಲ್ಲ" ಅಂತ ಯಾರಾದ್ರು ಹೇಳಿದರೆ, ಅಬ್ಬಬ್ಬಾ ಅಂದ್ರೆ "ಒಹ್ ಹೌದೆ, ಅಷ್ಟೊಂದು ದುಬಾರಿನಾ!" ಅಂತ ಮೂಗಿನ ಮೇಲೆ ಕೈ ಇಡ್ತಿರೇನೋ. ಇದೇ ಕಥಾವಸ್ತು "ರಿಚರ್ಡ್ ಲೂಯಿಸ್" ಕೈಗೆ ಸಿಕ್ಕರೆ, ಅದನ್ನ ಗಣೇಶ ಯಾಕೆ ಇಲೀನ ವಾಹನ ಮಾಡ್ಕೊಂಡ ಅಂತ ಹಾಸು ಹೊಕ್ಕಾಗಿ ಹಾಸ್ಯ ಹೆಣೆದು ನೆರೆದ ಜನಕ್ಕೆ ನಗೆ ಔತಣವನ್ನೇ ಬಡಿಸುತ್ತಾರೆ. ನವೆಂಬರ್ ೯, ಶನಿವಾರದ ಸಂಜೆ ಆದದ್ದೂ ಅದೇ. ಸುಗಮ ಕನ್ನಡ ಕೂಟ, ಸಿಡ್ನಿ ಕನ್ನಡ ಶಾಲೆ ಆಶ್ರಯದಲ್ಲಿ ದಸರಾ ಮತ್ತು ಕನ್ನಡ ರಾಜ್ಯೋತ್ಸವದ ಕಾರ್ಯಕ್ರಮದ ಅಂಗವಾಗಿ ರಿಚರ್ಡ್ ಅವರ ನಗೆ ಹೂರಣ ಬಡಿಸಿತ್ತು.

ಕಾರ್ಯಕ್ರಮದ ಶುರು ಶ್ರೀ ದಿವಾಕರ್ ಅವರ ಸುಶ್ರಾವ್ಯ ಗಾಯನ ಮತ್ತು ತದನಂತರದ ವೀಣಾವಾದನದಿಂದ ಆಯಿತು. ಆಕ್ಲೆಂಡ್ ನಲ್ಲಿ ನೆಲೆಸಿದ್ದ ಶ್ರೀ ದಿವಾಕರ್ ಅವರು ಇತ್ತೀಚೆಗಷ್ಟೇ ಸಿಡ್ನಿಗೆ ಬಂದು ನೆಲಸಿದ್ದಾರೆ. ದಾಸರ ಪದಗಳ ಅವರ ಹಾಡುಗಾರಿಕೆ ದಸರಾ ಸಂಗೀತದ ವೈಭವ ತರಿಸಿತ್ತು. ತದನಂತರದ ವೀಣಾವಾದನದಲ್ಲಿ ನುಡಿಸಿದ "ಪವಮಾನ" ರಚನೆ ನೆರೆದ ಜನ ತಲೆ ತೂಗಿಸಿ ಆಲಿಸುವಂತೆ ಮಾಡಿತು. ಸಾಮಾನ್ಯವಾಗಿ ವೀಣೆಯ ತಯಾರಿಕೆಯಲ್ಲಿ ಮೇಣವನ್ನು (ವ್ಯಾಕ್ಸ್) ಉಪಯೋಗಿಸುತ್ತಾರೆ. ದಿವಾಕರ್ ಅವರು ಮೇಣರಹಿತ ವೀಣೆ ಸಂಶೋಧಿಸಿದ್ದಾರೆ. ಇದರ ಬಗ್ಗೆ ಪರಿಚಯವೂ ಅವರಿಂದ ಆಯಿತು. ದಿವಾಕರ್ ಅವರ ಗಾಯನಕ್ಕೆ ಪಕ್ಕವಾದ್ಯದಲ್ಲಿ ಶ್ರೀನಾಥ್ ಅವರು ಸಾಥ್ ಕೊಟ್ಟು ತಮ್ಮ ತಬಲಾ ನೈಪುಣ್ಯವನ್ನು ತೋರಿದರು.

ಆ ಸಂಜೆಯ ಮುಖ್ಯ ಅಂಶವಾಗಿದ್ದ "ಹಾಸ್ಯ ಸಂಜೆ" ಯನ್ನು ರಿಚರ್ಡ್ ಲೂಯಿಸ್ ಎಳ್ಳಷ್ಟೂ ಲೋಪವಿಲ್ಲದಂತೆ ನೆರವೇರಿಸಿಕೊಟ್ಟರು. ವೇದಿಕೆಯ ಮೇಲೆ ರಿಚರ್ಡ್ ತಮ್ಮ ಮಾತಿನಲ್ಲಷ್ಟೇ ಅಲ್ಲದೆ ಆಯಾ ಹಾಸ್ಯಕ್ಕೆ ತಕ್ಕಂತಹ ಹಾವ ಭಾವ ಪ್ರದರ್ಶಿಸುತ್ತ, ಜೊತೆಗೆ ಹಾಡು, ಶಾಯರಿ, ಕವನ ಇತ್ಯಾದಿ ಪೂರಕ ಸಾಮಗ್ರಿ ಒದಗಿಸಿಕೊಂಡು ಎಲ್ಲರನ್ನೂ ನಗೆ ಗಡಲಿನಲ್ಲಿ ಮುಳುಗಿಸಿಯೇ ಬಿಟ್ಟರು. ಸಮಾಜದ ಅಂಕು ಡೊಂಕುಗಳನ್ನು ತಿವಿಯುತ್ತ, ಹಾಸ್ಯಪೂರಿತ ಮಾತಿನಿಂದ ಒಳೊಳ್ಳೆ ಸಂದೇಶವನ್ನೂ ಕೊಟ್ಟರು. ನೆರೆದ ಜನ ನಗು ನಿಲ್ಲಿಸಬಾರದು ಎಂದೇ ಪಣ ತೊಟ್ಟಿದ್ದ ರಿಚರ್ಡ್ ೯೦ ನಿಮಿಷ ಅಲ್ಲಿ ಸೇರಿದ್ದ ಯಾರಿಗೂ ಲೋಕದ ಚಿಂತೆ ಬರದ ಹಾಗೆ ನೋಡಿಕೊಂಡು ಮಾತಿನ ಮೋಡಿಯಲ್ಲಿ ಸೆಳೆದುಕೊಂಡಿದ್ದರು... (ಮುಂದಿನ ಪುಟ ನೋಡಿ)

ಕೇಳೋಣ

ರಿಚರ್ಡ್ ಲೂಯಿಸ್ ರೊಂದಿಗೆ ಸಂದರ್ಶನ
ಕೇಳಲು ಚಿತ್ರ ಕ್ಲಿಕ್ ಮಾಡಿ (Click picture to view)

ಮಾಸ್ತರ್ ಹಿರಣ್ಣಯ್ಯ ಬರೆದ ಮುಖ್ಯಮಂತ್ರಿಗೊಂದು ಬಹಿರಂಗ ಪತ್ರ ಪುಟ ೫

ದಿವಾಕರ್ ಅವರ ಮೇಣ ರಹಿತ ವೀಣೆ
ನೋಡಿ ತಿಳಿಯಲು ಚಿತ್ರ ಕ್ಲಿಕ್ ಮಾಡಿ (Click picture to view)

ನೋಡೋಣ

ನಿಮ್ಮ ಕಥೆ, ಕವನ, ಸಲಹೆ ಇತ್ಯಾದಿ ನಮಗೆ ಕಳುಹಿಸಿ. ನಮ್ಮ ಇ-ಮೇಲ್ – HORANADACHILUME@GMAIL.COM

ಈಗಿನ ಸುದ್ದಿ

ಸಿಡ್ನಿಯಲ್ಲಿ ದಸರಾ ಮತ್ತು ಕರ್ನಾಟಕ ರಾಜ್ಯೋತ್ಸವ

(ಹಿಂದಿನ ಪುಟದಿಂದ) ... ಸ್ಥಳೀಯ ಪ್ರತಿಭೆಗಳು ತಮ್ಮ ಕಲೆಯನ್ನು ಪ್ರಸ್ತುತ ಪಡಿಸಲು ಕಾರ್ಯಕ್ರಮದಲ್ಲಿ ಅವಕಾಶ ಕಲ್ಪಿಸಲಾಗಿತ್ತು. ಹಿರಿಕಿರಿಯರೆನ್ನದೆ ಹಲವಾರು ಗಾಯಕ ಗಾಯಕಿಯರು ತಮ್ಮ ಗಾನ ಚಾತುರ್ಯವನ್ನು ಸಭೆಗೆ ತೋರಿಸಿಕೊಟ್ಟು ಕರತಾಡನ ಪಡೆದುಕೊಂಡರು. ಕನ್ನಡ ಭಾಷೆಗೆ ಸೇವೆ ಸಲ್ಲಿಸುವ ಪ್ರತಿಭೆಗಳಿಗೆ ಪ್ರತಿ ವರ್ಷದ ಪ್ರತೀತಿಯಂತೆ ಈ ವರ್ಷವೂ ಪ್ರಶಸ್ತಿ ಘೋಷಣೆಯಾಯಿತು. ಈ ವರ್ಷ ಹಲವು ಕಲಾ ಚಾತುರ್ಯ ಹೊಂದಿದ ಶ್ರೀ ನಾಗಶೈಲ ಅವರಿಗೆ "ಸಿರಿ ಕನ್ನಡ ಪುತ್ರ" ಎಂಬ ಬಿರುದಾವಳಿಯನ್ನು ನೀಡಿ ಗೌರವಿಸಲಾಯಿತು.

ದಸರಾ ಹಬ್ಬದ ಪ್ರಯುಕ್ತ ಗೊಂಬೆ ಇಲ್ಲದಿದ್ದರೆ ಆಗುತ್ತದೆಯೇ? ಖಂಡಿತ ಇಲ್ಲ. ಸುಗಮ ಕನ್ನಡ ಕೂಟದ ಆಶ್ರಯದಲ್ಲಿ ಪ್ರತಿ ವರ್ಷದಂತೆ, ಈ ವರ್ಷವೂ ನೂರಾರು ಬಗೆಯ ವಿಧವಿಧವಾದ ಅಪರೂಪದ ಗೊಂಬೆಗಳನ್ನು ಒಪ್ಪವಾಗಿ ಜೋಡಿಸಿಟ್ಟಿದ್ದರು. ಇಲ್ಲೇ ಬೆಳೆಯುವ ಮಕ್ಕಳಿಗೆ, ನಮ್ಮ ಸಂಸ್ಕೃತಿಯ "ಬೊಂಬೆ ಸಾಲನ್ನು" ತೋರಿಸಲು ಇದಕ್ಕಿಂತ ಒಳ್ಳೆ ಅವಕಾಶ ಉಂಟೆ? ಬೊಂಬೆಗಳನ್ನು ಜೋಪಾನವಾಗಿ ನೋಡಿಕೊಂಡು ಪ್ರತಿ ವರ್ಷ ಪ್ರದರ್ಶಿಸುವ ಈ ಪರಿಪಾಠ ಮೆಚ್ಚಲೇಬೇಕು.

ಸುಗಮ ಕನ್ನಡದ ವೆಬ್ ಸೈಟ್ ನೋಡಿಕೊಳ್ಳುವ ವಿನಯ್ ನಾರಾಯಣ್, ಕನ್ನಡ ಶಾಲೆಯ ನಾಗೇಂದ್ರ ಅನಂತಮೂರ್ತಿ, ಹೊರನಾಡ ಚಿಲುಮೆ ಇ-ಮಾಸಪತ್ರಿಕೆಯ ಸಂಪಾದಕರಾದ ಬದರಿ ನಾರಾಯಣ ಅವರನ್ನು ಸನ್ಮಾನಿಸಲಾಯಿತು.

ನಗು ನಗುತ್ತಾ ಕಾರ್ಯಕ್ರಮದ ನಿರೂಪಣೆ ಮಾಡಿದ ಪೂರ್ಣಿಮಾ ಭಟ್, ಒಳ್ಳೆಯ ನಿರೂಪಕಿಯೆಂದು ಗುರುತಿಸಲ್ಪಟ್ಟರು.
ಸಿಡ್ನಿ ಕನ್ನಡ ಶಾಲೆ, ಸುಗಮ ಕನ್ನಡ ಕೂಟ ಮುಂತಾದ ಕನ್ನಡ ಪೋಷಣೆಯ ಸಂಸ್ಥೆಗಳ ರೂವಾರಿಯಾದ ಕನಕಾಪುರ ನಾರಾಯಣ ಅವರು ಕಾರ್ಯಕ್ರಮಕ್ಕೆ ಸಹಕರಿಸಿದ ಎಲ್ಲರಿಗೂ ಧನ್ಯವಾದ ಅರ್ಪಿಸುತ್ತಾ ಆ ಸಂಜೆಯ ಕಾರ್ಯಕ್ರಮ ಮುಕ್ತಾಯಗೊಳಿಸಿದರು
ಬಂದಿದ್ದ ಜನಸಾಗರಕ್ಕೆ ಕಾರ್ಯಕ್ರಮದ ನಂತರ ರುಚಿಕರವಾದ ಸಜ್ಜಿಗೆ, ಬಿಸಿಬೇಳೆ ಭಾತ್, ಮೊಸರನ್ನ ವಿತರಿಸಲಾಯಿತು.
ಎಲ್ಲರೂ ನಗುನಗುತ್ತ ತಮ್ಮ ಮನೆಗೆ ಹೋಗುವಾಗ ಕಾರ್ಯಕ್ರಮದ ಸಾರ್ಥಕ್ಯತೆ ಎದ್ದು ಕಾಣುತ್ತಿತ್ತು. ▪

ವರದಿ: ಬದರಿ ತ್ಯಾಮಗೊಂಡ್ಲು
ಚಿತ್ರಗಳು: ಕನಕಾಪುರ ನಾರಾಯಣ

ಸಂಪಾದಕೀಯ

ಬದರಿ ತ್ಯಾಮಗೊಂಡ್ಲು

ಡಿಸೆಂಬರ್ ಬಂದರೆ ಕ್ರಿಸ್ಮಸ್ ನೆನಪು ಬರದಿರುತ್ತದೆಯೇ! ಅದರಲ್ಲೂ ಸಾಂಟಾ ಕ್ಲಾಸ್ ಮಾಡುವ ಮೋಡಿಯೇ ಒಂದು ವಿಶೇಷ. ನಾವು ಇಷ್ಟ ಪಡುವ ಏನಾದರೂ ಕೊಡುಗೆ ತಂದು ಕೊಡುವನೆಂದೇ ಪ್ರತೀತಿ. ಮತ್ತು ನಂಬಿಕೆಯೂ ಹೌದು. ಹಾಗಾದರೆ ಎಲ್ಲರಿಗೂ ಕೊಡುವನೇ? "ಇಲ್ಲಾ ... ಒಳ್ಳೆಯವರಿಗೆ ಮಾತ್ರಾ". ಇದನ್ನ ಚಿಕ್ಕ ಮಕ್ಕಳಲ್ಲಿ ಅವರಿಗಿಷ್ಟವಾಗುವ ಪದ್ಯಗಳ ಮೂಲಕ ಈ ಸಂದೇಶ ಹರಡಲಾಗುತ್ತದೆ. ಕೇಳಿದ್ದೀರಲ್ಲವೇ ...

You better watch out, You better not cry, Better not pout, I'm telling you why
Santa Claus is coming to town
He's making a list, And checking it twice; Gonna find out Who's naughty and nice.
Santa Claus is coming to town

ಈ ಸಂದೇಶದ ಹಿಂದೆ ಮಕ್ಕಳನ್ನು ಒಳ್ಳೆಯ ಅಭ್ಯಾಸಗಳೊಂದಿಗೆ ಸತ್ ಪ್ರಜೆಗಳನ್ನಾಗಿಸುವ ಉದ್ದೇಶ ಅಂತೂ ಸ್ಪಷ್ಟವಾಗಿ ಗೋಚರಿಸುವುದು.

ಬಹಳ ಪ್ರಾಚೀನವಾದ ವೇದ-ಉಪನಿಷತ್ತಿನ ಸಾರವೂ ಇದೇ ಆಗಿದೆ. ತೈತ್ತರೀಯ ಉಪನಿಷತ್ ನ ಶಿಕ್ಷಾವಲ್ಲಿಯಲ್ಲಿ ಬರುವ "ಸತ್ಯಂ ವದ, ಧರ್ಮಂ ಚರ ...", ಬಾಳುವ ರೀತಿಯನ್ನು ಹೇಳಿ ಕೊಡುತ್ತದೆ. ಅದರಂತೆಯೇ ನಂತರ ಬಂದ ವಚನಗಾರರು "ಕಳಬೇಡ, ಕೊಲಬೇಡ, ಹುಸಿಯ ನುಡಿಯಲು ಬೇಡ ..." ಎಂದು ಪ್ರಾಚೀನ ಸತ್ ಮಾರ್ಗವನ್ನು ಪುನರುಚ್ಚರಿಸಿದ್ದಾರೆ. ಈ ಹಿರಿ ಚೇತನಗಳ ಆಶಯ ಒಂದೇ. ಈ ಜಗತ್ತು ಸುಂದರವಾಗಿರಲಿ ಎಂದು.

Beechi ತಮ್ಮ "ಭಯಾಗ್ರಫಿ" ಯಲ್ಲಿ ಹೇಳುತ್ತಾರೆ ... "ನಮ್ಮನ್ನು ಒಯ್ಯುವುದು ಹೇಗೆ ಎಂದು ಸಾವಿಗೆ ಗೊತ್ತಿರುತ್ತದೆ, ಆದರೆ ಉಸಿರಿದ್ದಾಗ ಹೇಗೆ ಬದುಕಬೇಕು ಎಂದು ನಮಗೆ ತಿಳಿದಿರಬೇಕಲ್ಲವೇ?" ಎಂದು. ಆದ್ದರಿಂದ ಬೇಡದ ರಾಜಕೀಯ ಜೀವನದಲ್ಲಿ ತಂದು, ಅನಗತ್ಯವಾದ ದ್ವೇಷ ಅಸೂಯೆ ಹೊಂದಿ ತಾವೂ ಸುಖಿಸದೆ ಇತರರಿಗೂ ಸುಖವಾಗಿರಲು ಬಿಡದೆ, ಸದಾ ಚಿಂತೆಯಿಂದ ಕೂಡಿದ ಜೀವನ ನೆಡಸಬೇಕೇ? ಖಂಡಿತ ಬೇಡ. ಸಾಂಟಾನ ಆ ನಗುಮುಖ ನೆನೆಪಿಸಿಕೊಂಡು, ಎಲ್ಲೆಲ್ಲೂ ಸಂತಸ ಹರಡಿ, ಈ ಹಬ್ಬದ ಸಮಯದಲ್ಲಿ ಎಲ್ಲೆಲ್ಲೂ ಉತ್ಸಾಹದ ಚಿಲುಮೆ ಎಲ್ಲರಲ್ಲೂ ಮೂಡಲಿ ಎಂಬುದೇ ನಮ್ಮ ಆಶಯ.
ಹೊ! ಹೊ! ಹೊ! ▪

ಮಾಸ್ಟರ್ ಮಾತು

ಮಾಸ್ಟರ್ ಹಿರಣ್ಣಯ್ಯ

ಲಂಬಾವತಾರ ಖ್ಯಾತಿಯ ಹಿರಿಯ ರಂಗಭೂಮಿ ಕಲಾವಿದರು

ನಮ್ಮ ದೇಶ-ನಮ್ಮ ಮೋದಿ

ನಾನು ಹುಟ್ಟಿದ್ದು ೧೯೩೪ ರಲ್ಲಿ. ನಮ್ಮ ದೇಶಕ್ಕೆ ಸ್ವತಂತ್ರ ಬಂದಾಗ ನನಗೆ ಹದಿನಾರು ವರ್ಷ. ಅಂದರೆ ನನ್ನ ೮-೯ನೇ ವಯಸ್ಸಿನಲ್ಲೇ ಅಂದಿನ ಆಂಗ್ಲರ ಆಳ್ವಿಕೆಯನ್ನು ಕಂಡುಂಡು, ಅನುಭವಿಸಿರುವವನು. ಅಲ್ಲದೇ ಅಂದು ನನ್ನ ಮೈಸೂರಿನ ವಿದ್ಯಾವ್ಯಾಸಂಗದಿಂದಲೇ ಆರ್.ಎಸ್.ಎಸ್. ನ ಒಬ್ಬ ನಿಷ್ಠಾವಂತ ಪಟುವಾಗಿದ್ದುಕೊಂಡು, ಕಲ್ತಿದ್ದು ಜೀವನದ ಅತಿಮುಖ್ಯ ಮೂರು ಪಾಠಗಳನ್ನು.

ಒಂದು - "ಕಾಲವನ್ನು ಪೂಜಿಸುತ್ತೇನೆ".

ಎರಡು - "ನನ್ನ ವೃತ್ತಿಯನ್ನು ಪ್ರೀತಿಸುತ್ತೇನೆ".

ಮೂರನೆಯದು - "ನನ್ನ ದೇಶವನ್ನು ಗೌರವಿಸುತ್ತೇನೆ".

ಈ ಮೂರು ತತ್ವಗಳನ್ನು ಇಂದಿಗೂ ಪಾಲಿಸಿಕೊಂಡೇ ಬರುತ್ತಿದ್ದೇನೆ. ಕಾಲದ ಮಹಿಮೆ ಬಲ್ಲವನೇ ಬಲ್ಲ. ಬದುಕಲ್ಲಿ ಏನೇ ಹೋದರೂ ವಾಪಸ್ಸು ತರಬಹುದು. ಅಮ್ಮ ಸತ್ತರೆ ಮಲತಾಯಿ, ಅಪ್ಪ ಸತ್ತರೆ ಗಾಡ್ ಫಾದರ್, ಮಕ್ಕಳು ಸತ್ತರೆ ದತ್ತು ಸಂತಾನ, ಹೆಂಡತಿ ಸತ್ತರೆ ಪುನರ್ ಲಗ್ನ ಹೀಗೆ ಎಲ್ಲಕ್ಕೂ ಪರ್ಯಾಯ ಇದೆ. ಕಳೆದ ಕಾಲವನ್ನು ಕೋಟಿ ಕೋಟಿ ಕೊಟ್ಟರೂ ತರಲಾಗದು. ಅಷ್ಟೇಕೆ "ಕಾಲನೂ ಸಹ ಕಾಲ ಮೀರಿ ಬರನು" ಅಂದಾಗ ಅದರ ಮಹತ್ವ ಎಷ್ಟಿರಬಹುದು. ಅದಕ್ಕೇ ಅದನ್ನು ಪೂಜಿಸುವುದು. ಇನ್ನು ವೃತ್ತಿ-ಅದೇಂಥದೇ ವೃತ್ತಿಯಾಗಲಿ ಅದನ್ನು ಪ್ರೀತಿಯಿಂದ ಮಾಡುತ್ತೇನೆ. ಅದನ್ನು ಸ್ವೀಕರಿಸುವ ಮುಂಚೆ ಎಷ್ಟು ಬೇಕಾದರೂ ಯೋಚಿಸೋಣ, ಚರ್ಚಿಸೋಣ. ಆದರೆ ಒಮ್ಮೆ ಅವಲಂಬಿಸಿದ ಮೇಲೆ ಅದು ಅನ್ನ ನೀಡುವ ದೈವ ಸಮಾನ. ಅದಕ್ಕೇ ಅದನ್ನು ಪ್ರೀತಿಸುತ್ತೇನೆ. ಕೊನೆಯದಾಗಿ, ನನ್ನ ದೇಶ - ಶ್ರೀರಾಮನ ಆದೇಶ "ಅಪಿ ಸ್ವರ್ಣ ಮಯೀ ಲಂಕಾ, ನಮೇ ಲಕ್ಷ್ಮಣ ರೋಚತೆ. ಜನನೀ ಜನ್ಮ ಭೂಮಿಶ್ಚ ಸ್ವರ್ಗಾದಪಿ ಗರೀಯಸಿ". ಅಬ್ಬಾ ಎಂಥಾ ಅಮೃತಪೂರಿತ ಮಾತದು. ಸರ್ವ ಕಾಲಿಕ, ಸರ್ವ ಲೋಕ ಪೂಜಿತ ಅಲ್ಲವೇ? ಒಬ್ಬ ಕವಿ ಹೇಳಿರುವಂತೆ-:ಜೀನಾ ಯಹಾಂ, ಮರ್ನಾ ಯಹಾಂ, ಇಸ್ಕೆ ಸಿವಾ ಜಾನಾ ಕಹಾಂ"ಎಂದು. ನಮಗಿರುವುದು ಒಂದೇ ದೇಶ. ಅನ್ಯರಿಗೆ ನಾನಾ ದೇಶಗಳಿವೆ. ನಾವು ಇದನ್ನೂ ಕಳೆದು ಕೊಂಡರೆ ಹೋಗಬೇಕೆಲ್ಲಿಗೆ? ಆದರಿಂದ ಈ ದೇಶಕ್ಕಿಂತ ದೊಡ್ಡದು ನಮಗ್ಯಾವುದೂ ಇಲ್ಲ.

ಈ ಮೂರರಲ್ಲೂ ನಂಬಿಕೆಯಿಟ್ಟು ಬಾಳುತ್ತಿರುವವನೇ ನಿಜವಾದ ಭಾರತೀಯ, ಪರಿಪೂರ್ಣ ಮನುಷ್ಯ. ಇಂದು ಅಂಥವರು ಅತಿ ವಿರಳವಾಗುತ್ತಿದ್ದಾರೆ. ಅಂಥಾ ಮಹಾನುಭಾವರು ನಮ್ಮ ದೇಶಕ್ಕೆ ನಾಯಕರಾದರೆ ಮಾತ್ರಾವೇ ದೇಶ ಹಾಗೂ ದೇಶವಾಸಿಗಳೂ ಉಳಿದಾರು ಮತ್ತು ಉದ್ಧಾರವಾದಾರೂ. ಈ ಕಳೆದ ೬೫ ವರ್ಷಗಳಲ್ಲಿ ನಾವು ಎಲ್ಲಾ ಪಕ್ಷದ ನಾಯಕರನ್ನೂ ನೋಡಿದ್ದೂ ಆಯ್ತೂ, ಮತ್ತು ಅವರ ಆಳ್ವಿಕೆಯನ್ನೂ ಅನುಭವಿಸಿದ್ದೂ ಆಯ್ತು. ೧೯೪೭ ರಿಂದ ಇಂದಿನವರೆಗೂ ನಮ್ಮ ನಂಬಿಕೆಯ ಗ್ರಾಫು ಕೆಳಮುಖವಾಗಿ ಇಳಿಯುತ್ತಿದೆಯೇ ವಿನಃ ಏರನ್ನು ಒಮ್ಮೆ ಮಾತ್ರಾ ಕಂಡಿದ್ದೆವು. ಅದು ನಮ್ಮ ಅತ್ಯಂತ ಪ್ರಭಾವಪೂರ್ಣ ನಾಯಕರಾಗಿ ಹೊರಹೊಮ್ಮಿದ್ದ, ಸತತವಾಗಿ ಐದು ವರ್ಷ ಆಳಿ, ಆಸೇತು ಹಿಮಾಚಲ ಪರ್ಯಂತಾ ಸಂಪರ್ಕ ಸಾಧಿಸಿ ತೋರಿಸಿದ ಪೂಜ್ಯ ವಾಜಪೇಯಿಯವರನ್ನೇ. ಇನ್ನೊಂದು ಐದು ವರ್ಷ ಅವರ ಕೈಲೇ ದೇಶವನ್ನು ನಾವು ಕೊಟ್ಟಿದ್ದಿದ್ದರೇ, ನದಿಗಳ ಜೋಡಣೆಯನ್ನೂ ಮಾಡಿಕೊಟ್ಟು, ರೈತರ ಬದುಕನ್ನ, ನಾಗರೀಕರ ಅನ್ನದ ಬರವನ್ನ ಹಿಂಗಿಸಿ, ಅತಿವೃಷ್ಟಿ-ಅನಾವೃಷ್ಟಿಗಳಿಂದ ದೇಶವನ್ನು ಪಾರುಗಾಣಿಸಿ ಕೊಡುತ್ತಿದ್ದರು. ಇಲ್ಲವೇ-ನಮಗಾ ಯೋಗವಿಲ್ಲವೇ. ನಿರಾಶರಾಗಿ ಕೈಚಲ್ಲಿ ಕೂತಿರುವ ನಮ್ಮ ಪಾಲಿಗಿಂದು ಅಂಥಾ ಧೀಮಂತ, ಆದರ್ಶ, ನಿಸ್ವಾರ್ಥ ನಾಯಕನ ಉದಯವನ್ನು ಕಾಣುತ್ತಿದ್ದೇವೆ. ಈಗ ನಾವು ಹಿಂದೆ ಮಾಡಿದ ತಪ್ಪನ್ನೇ ಪುನಃ ಮಾಡಿದ್ದೇ ಆದರೆ, ಇನ್ನಿಂಥಾ ಅವಕಾಶ ಸಿಗದು. ಇದು ಒಬ್ಬರ ಉದ್ಧಾರದ ಮಾತಲ್ಲ. ಇಡೀ ದೇಶದ ಪ್ರಶ್ನೆ. ಪ್ರತಿಯೊಬ್ಬ ಮತದಾರನೂ ಎಚ್ಚರ ವಹಿಸಿ, ಮಾನ್ಯ ನರೇಂದ್ರ ಮೋದಿಯವರನ್ನೇ ಈ ಬಾರಿ ನಂಬಿದರೆ, ಮುಂದೆ ನಮ್ಮ ಮಕ್ಕಳ ಶಾಪದಿಂದ ಪಾರಾಗಬಹುದು. ಹಾಗಿಲ್ಲದೇ ಹೋದರೆ ಯಥಾಪ್ರಕಾರ ಇತರ ಪಕ್ಷಗಳ ಹುಸಿಪ್ರಣಾಳಿಕೆಯನ್ನು ನಂಬಿ, ಈ ಅವಕಾಶವನ್ನು ಬಿಟ್ಟರೆ, ನಮ್ಮ ದೇಶದ ಹಣದ ಹೊಳೆ ಪಶ್ಚಿಮದ ಕಡೆಗೆ ಹರಿದು ಹೋಗಿ, ಸ್ವಿಸ್ ಮುಂತಾದ ಬ್ಯಾಂಕುಗಳಲ್ಲಿ ಶೇಖರಿತವಾಗಿ, ಆ ದೇಶದ ಉದ್ಧಾರವಾದೀತು ಅಷ್ಟೇ. ಈಗಾಗಲೇ ಅಲ್ಲಿ ಸಾಕಷ್ಟು ನಮ್ಮ ಸಂಪತ್ತು ಶೇಖರಿತವಾಗಿ, ನಮ್ಮ ದೇಶದಲ್ಲಿ ಆರ್ಥಿಕ ಮುಗ್ಗಟ್ಟು ಎಷ್ಟರ ಮಟ್ಟಿಗೆ ಮುಟ್ಟಿದೆ ಅಂದರೆ, ನಾ ಕಂಡಂತೆ ಒಂದು ಡಾಲರ್ಗೆ ೧೧ ರೂ. ಇದ್ದದ್ದು, ಈಗ ೬೦-೭೦ ರೂ ಗಳಾಗಿದೆ. ಬೆಳದ ಬೆಳೆಗೆ ಬೆಲೆ ಇಲ್ಲಾ. ಮಧ್ಯವರ್ತಿಗಳೇ ತಿಂದು ತೇಗುತ್ತಿದ್ದಾರೆ. ಗ್ರಾಹಕನಿಗೂ ಇಲ್ಲಾ-ಬೆಳೆದವನಿಗೂ ಇಲ್ಲಾ ಆಗಿದೆ. ಇನ್ನು ಎಲ್ಲ ಧರ್ಮದವರೂ ಒಬ್ಬ ತಾಯಿಯ ಮಕ್ಕಳಂತೆ ಬಾಳಿದ ಈ ಪವಿತ್ರ ದೇಶವಿಂದು, ಅನ್ಯ ಪಕ್ಷದವರ ಮತದ ಬೇಟೆಗೆ ಸಿಕ್ಕಿ ಮತದ್ವೇಶದ ದಳ್ಳುರಿಗೆ ಆಹುತಿಯಾಗಿ ಭವಿಷ್ಯವೇ ಇಲ್ಲದಂತಾಗಿದೆ. ಇದೆಲ್ಲಕ್ಕೂ ಪರಿಹಾರವೆಂದರೆ, ನಮಗೆ ಇನ್ನೊಬ್ಬ ವಾಜಪೇಯಿ, ಸರ್ದಾರ್ ವಲ್ಲಭಾಯ್ ಪಟೇಲ್ ಬೇಕು. ೧೨೦ ಕೋಟಿ ಭಾರತೀಯರನ್ನೂ ಮಕ್ಕಳಂತೆ ಪೋಷಿಸುವಾತನೊಬ್ಬ ಬೇಕಾಗಿದೆ. ಅವನು ನಮ್ಮಿಂದಲೇ ನೇಮಕವಾಗ ಬೇಕಿದೆ.

ನಾನು ಹಿಂದೊಮ್ಮೆ ಗುಜರಾತಿನಲ್ಲಿ ತಿಂಗಳಿದ್ದು, ನಾಲ್ಕಾರು ನಾಟಕಗಳನ್ನಾಡುವ ಪುಣ್ಯವೂದಗಿ ಬಂದಿತ್ತು. ನಮ್ಮ ಬಂಧುಗಳ ಮನೆ ಇದ್ದ ಕಾರಣ ತಿಂಗಳಿದ್ದು ಅಲ್ಲಿಯ ರಾಜಕೀಯಾದಿ ಸಕಲ ವಿಚಾರಗಳತ್ತೆಲ್ಲಾ ಗಮನಹರಿಸಿದ್ದೆ. ಆಗ ನಮ್ಮನ್ನು ಕಂಟ್ರಾಕ್ಟ್ ಮಾಡಿಕೊಂಡು ಅಲ್ಲಿಗೆ ಕರೆದೊಯ್ದಿದ್ದವರಲ್ಲಿ ಒಬ್ಬರು ಅನ್ಯ ಮತೀಯರೂ ಇದ್ದರು. ಅವರೊಂದಿಗೆ ಮಾತಾಡುವಾಗ ಆ ಮತದವರೆಲ್ಲಾರದ್ದೂ ಒಂದೇ ಮಾತಾಗಿತ್ತು. "ಹಮಾರ ದಾದಾ ರಹೇತೋ ಬಸ್ಸ್. ಹಮ್ಕೊ ಕೋಹೀ ತಕ್ಲೀಫ್ ನಹಿ ರಹೇಗ"ಅನ್ನುತ್ತಿದ್ದರು. ಅವರ ಅಭಿಪ್ರಾಯದಲ್ಲಿ ದಾದಾ ಅಂದರೆ ಶ್ರೀ ನರೇಂದ್ರ ಮೋದಿ. ಇದೊಂದು ಕಾಮನ್ ಯೂಸೇಜಾಗಿತ್ತು. ಈದೇಶದ ಪ್ರಜಾಸತ್ತೆಯೆಂದರೆ-"ತುಳಿದು ಬಾಳುವವರೇ ಮೇಲಾಗಿ, ತಿಳಿದು ಬಾಳುವವರೇ ಹಾಳಾಗಿ ಹೋಗುವುದು". ಅದರಲ್ಲೂ ಕಳೆದ ಮೂರು ನಾಲ್ಕು ಚುನಾವಣೆಗಳನ್ನು ನೆನಪಿಸಿಕೊಂಡು ನೋಡಿ. ಜನರ ಬಗೆಯ ಕಾಳಿಜಿಗಿಂತಾ, ಮುಂದೆ ತಾವೇ ಗೆದ್ದಲ್ಲಿ ದೇಶಕ್ಕೇನು ಮಾಡುತ್ತೇವೆಂದತ್ತವಾಗಲೀ, ಕಿಂಚಿತ್ತಾದರೂ ಹೇಳಿದವ ಯಾರೊಬ್ಬರನ್ನಾದರೂ ತೋರಿಸಬಲ್ಲಿರಾ?

ಮುಂದಿನ ಪುಟ ನೋಡಿ ...

ಅವರತ್ತ ಇವರು, ಇವರತ್ತ ಅವರು ಕೆಸರೆರಚಾಟವೇ ಪರಂತು ಅನ್ಯ ಮಾತೇ ಕಾಣೆವು. ಅವನು ತಿಂದಿದ್ದೆಲ್ಲಾ ನನಗೆ ಗೊತ್ತೂ, ನಾವು ಗೆದ್ದರೆ ಅದನ್ನೆಲ್ಲಾ ಕಕ್ಕಿಸುತ್ತೇವೆ ಎಂದು ಒಂದು ಪಕ್ಷದ ಕೂಗಾದರೆ, ಇವರು ಕಬಳಿಸಿರೋ ಸರ್ಕಾರದ ಜಮೀನಿನ ಪಟ್ಟಿ ನಮ್ಮ ಬಳಿಯಿದೆ, ನಾವೇ ಗೆದ್ದರೆ ಅದನ್ನೆಲ್ಲಾ ಹೊರಹಾಕಿ, ಅವರನ್ನೆಲ್ಲಾ ಜೈಲಿಗೆ ಕಳುಹಿಸುತ್ತೇವೆಂಬುದು ಇನ್ನೊಂದು ಪಕ್ಷದವರ ಕಿರ್ಲು. ಅವಧಿಯೇ ಮುಗಿಯುತ್ತಾ ಬಂದರೂ ಯಾರದ್ದನ್ನ ಯಾರೂ ಹೊರಹಾಕಲಿಲ್ಲ. ಕಾರಣ ಇಬ್ಬರೂ ಕಳ್ಳರೇ.

ಯಾರಕಾಲದಲ್ಲೂ ಇಲ್ಲದಷ್ಟು ಸ್ಕ್ಯಾಂಡಲ್ಗಳು, ಸಹಸ್ರ ಸಹಸ್ರ ಕೋಟಿಗಳ ಗುಳುಂ ಆಗಿದೆ ಇವರ ಕಾಲದಲ್ಲಿ, ಆದರೂ ಯಾರೊಬ್ಬರಿಗೂ ಶಿಕ್ಷೆಯಾಗಿಲ್ಲ. ಈಗ ಚುನಾವಣೆಯು ಸಮೀಪಗತವಾಗುತ್ತಿರುವ ಕಾರಣ ಚಿತ್ರವಿಚಿತ್ರ ಆಶ್ವಾಸನೆಗಳು, ಸಾಲ-ಬಡ್ಡಿ ಮನ್ನಾ, ಶಾದೀ ಭಾಗ್ಯ, ರೂಪಾಯಿ ಒಂದಕ್ಕೊಂದು ಕೆ.ಜಿ. ಅಕ್ಕಿ, ಅಬ್ಬಬ್ಬಾ ಅದೇನು ಭಾರತೀಯರನ್ನು ಶುದ್ಧ ಮೂರ್ಖರೆಂದು ಭಾವಿಸಿದ್ದಾರಾ ಈ ಜನ? ನಮ್ಮನ್ನೇನು ಕುರುಡರೆಂದು, ಕಿವುಡರೆಂದು ನಂಬಿದ್ದಾರಾ? ಬಾಯಿಸತ್ತವರಿರಬಹುದು-ಆದರೆ ಮೂಕರಂತೂ ದೇವರಾಣೆ ಅಲ್ಲಾ. ಒಡೆದಾಳುವ ಇವರ ಚಾಣಾಕ್ಷತನ ತಿಳಿಯದಂಥಾ ಮಂದಮತಿಗಳಂತೂ ಅಲ್ಲವೇ ಅಲ್ಲ. ಮೊದಲು ದೇಶವನ್ನು ಒಡೆದರು, ನಂತರ ರಾಜ್ಯರಾಜ್ಯಗಳನ್ನು ಭಾಷೆಯ ಹೆಸರಲ್ಲಿ ಒಡೆದರು, ಆಮೇಲೆ ಹಳ್ಳಿಹಳ್ಳಿಗಳನ್ನು ಒಡೆದರು, ನಂತರ ಹಳ್ಳಿಯ ಮನೆಮನೆಗಳನ್ನು ಒಡೆದರು, ನಂತರೂವೂ ಬಿಡಲಿಲ್ಲಾ, ಮನುಷ್ಯರನ್ನೂ ಒಡೆದು, ಅವರ ಮನಮನಸ್ಸುಗಳನ್ನು ಚೂರುಚೂರುನ್ನಾಗಿಸಿ ಬೀಗುತ್ತಿದ್ದಾರೆ ಯಾಕೆ,ಕೇವಲ ನಮ್ಮ ಮತ-ಅಧಿಕಾರ, ಹಣ ಮತ್ತು ಲೋಲುಪ್ತಿಗಳಿಗೇ ವಿನಃ, ದೇವರಾಣೆ ದೇಶೋದ್ಧಾರಕ್ಕಂತೂ ಅಲ್ಲ ಎಂಬುದು ಎಲ್ಲರಿಗೂ ಮನದಟ್ಟಾ ಗಿದೆ ಈ ೬೫ ವರ್ಷಗಳಲ್ಲಿ. ಅವರು ಮಾತ್ರಾ ಬೆಕ್ಕಿನಂತೆ ಕಣ್ಮುಚ್ಚಿಕೊಂಡೇ ಹಾಲು ಕುಡಿಯುತ್ತಿದ್ದಾರೆ ಹಣದ ರೂಪದಲ್ಲಿ.

ನಾವೂ ಅಷ್ಟೇ,ಜಾತಿಯ ಹೆಸರಲ್ಲಿ, ಹಣ-ಹೆಂಡದ ಅಮಲಿನಲ್ಲಿ, ಬಾಡೂಟ-ಹಂಚುವ ಸೀರೆಕುಪ್ಪುಸಗಳ ಆಕರ್ಷಣೆಯಲ್ಲಿ, ಅವರು ನೀಡುವ ಹಸಿಹಸಿ ಸುಳ್ಳಿನ ಆಶ್ವಾಸನೆಗಳ ಗುಂಗಿನಲ್ಲಿ, ಅವರ ಪೊಳ್ಳುಪೊಳ್ಳು ಭಾಷಣಗಳಿಗೆ ಮಾರುಹೋಗಿ, ಎಲ್ಲವನ್ನೂ ತಿಳಿದ್ದಿದ್ದೂ ಪುನಃಪುನಃ ಅವರನ್ನೇ ಗೆಲ್ಲಿಸುತ್ತಾ, ನಮ್ಮನ್ನು ನಾವೇ ವಂಚಿಸಿಕೊಳ್ಳುತ್ತಿಲ್ಲವೇ ಯೋಚಿಸಿ? ನಮ್ಮ ಮತವೇನು ಅಷ್ಟು ಚೀಪಾಗಿದ್ದು, ನಡುಬೀದಿಯಲ್ಲಿನ ಕಸವೇ? ಹಲವರಂತೂ ಚುನಾವಣೆಯ ದಿನ ಹೊರಕ್ಕೇ ಬರರು. ಬಂದರೂ ಸಿಕ್ಕಿರುವ ರಜೆಯನ್ನು ಹೆಂಡತೀ ಮಕ್ಕಳೊಂದಿಗೆ ಮೋಜಿಗೆ ಬರುತ್ತಾರೆ. ಮತ ಚಲಾವಣೆ ನಮ್ಮ ಹಕ್ಕು. ಅದನ್ನು ನಾವು ನಿರ್ವಹಿಸಿದರೆ ಮಾತ್ರವೇ, ಗೆದ್ದವರ ಅನ್ಯಾಯಗಳನ್ನು ಕೇಳುವ ಅಧಿಕಾರ ಬರುವುದು. ಕರ್ತವ್ಯ ಮತ್ತು ಹಕ್ಕು ಎರಡೂ ಯುಗಾದಿಯಂದು ನಾವು ತಿನ್ನುವ "ಬೇವು-ಬೆಲ್ಲದಂತೆ". ಎಲ್ಲರಿಗೂ ಬೆಲ್ಲ ಬೇಕು ಆದರೆ ಬೇವು ಯಾರಿಗೂ ಬೇಡ. ಅಂದರೆ ಕರ್ತವ್ಯ ಬೇಡ-ಹಕ್ಕು ಮಾತ್ರಾ ಬೇಕು-ಇದ್ಯಾವ ನ್ಯಾಯ ಹೇಳಿ? ಆದರಿಂದ ಈ ಬಾರಿಯಾದರೂ ನಾವೆಲ್ಲರೂ ಕರ್ತವ್ಯ ಪಾಲಿಸೋಣ-ಅಂದರೆ ಮತ ಚಲಾಯಿಸೋಣ. ಅದರಲ್ಲೂ ಯಾರ, ಯಾವಥರದ, ಅದ್ಯಾವ ತಾತ್ಕಾಲಿಕ ಕ್ಷಣಿಕ ಆಕರ್ಷಣೆಗಳಿಗೂ ಬಲಿಯಾಗದೇ ಮತ ಹಾಕೋಣ. ಆಗಮಾತ್ರ ನಮ್ಮ ಮಾನ್ಯ ನರೇಂದ್ರ ಮೋದಿಯವರಂಥಾ ನಿಷ್ಠಾವಂತ ನಾಯಕನ ಉದಯ ಸಾಧ್ಯವಾದೀತು. ಆ ಭಾಸ್ಕರ ಉದಯರಾಗ ನಮ್ಮ ಕೊರಳಿಂದ ಮಾತ್ರಾವೇ ಹೊರಹೊಮ್ಮಲು ಸಾಧ್ಯ. ಇಂಥವರ ಉದಯ ನವ ಭಾರತದ ಸೂರ್ಯೋದಯವಿದ್ದಂತೆ. ಮುಂದಿನ ಮಕ್ಕಳಿಗೊಂದು ಚಂದದ ಭಾರತವನ್ನು ಕಟ್ಟಿಕೊಟ್ಟು ಪುಣ್ಯ ಭಾಗಿಗಳಾಗೋಣ. ಇಂದಿನ ನಮ್ಮ ಎಲ್ಲ ಶ್ರಮಗಳೂ ಮುಂದಿನ ನಮ್ಮ ಮಕ್ಕಳ ಏಳಿಗೆಗಾಗಿ ಎಂಬ ನಿತ್ಯನುಡಿಯನ್ನು ಕಾರ್ಯೋನ್ಮುಖರಾಗಿಸೋಣ. "ಇಂದು ಮೋದಿಯವರು ಹೋದದ್ದೇ ಹಾದಿ". ಆ ಹಾದಿಯೇ ನಮ್ಮ ಮುಂದಿನ ಮಕ್ಕಳ ಜೀವನಕ್ಕೆ ಬುನಾದಿ. ಅದೊಂದೇ ಇಂದು ನಮಗುಳಿದಿರುವ ಸುಖಮಯ ಗಾದಿ. ಜೈ ಭಾರತ್, ▪

ಮುಕ್ತಾಯ ...

ಸಿಡ್ನಿ ಬಳಿಯ ನ್ಯೂ ಕಾಸಲ್ ನಲ್ಲಿ ಡಿಸೆಂಬರ್ ೧-೭ ರ ವರೆಗೆ ಅಂತಾರಾಷ್ಟ್ರೀಯ ಮಟ್ಟದ ಏಷ್ಯಾ-ಪೆಸಿಫಿಕ್ ವಿಶೇಷ ಮಕ್ಕಳ ಒಲಿಂಪಿಕ್ಸ್ ನಡೆಯಿತು. ಈ ಸ್ಪರ್ಧೆಯಲ್ಲಿ ಕರ್ನಾಟಕದ ಮಣಿಪಾಲದಿಂದ ಬಂದಿದ್ದ "ಆಸರೆ" ವಸತಿ ಶಾಲೆಯ ವಿದ್ಯಾರ್ಥಿನಿ ಎಂ.ಜೆ. ಅರ್ಚನ ಕಂಚಿನ ಪದಕ ಪಡೆದಿದ್ದಾರೆ. ಇವರ ಬಗ್ಗೆ ಲೇಖನ ಮುಂದಿನ ಸಂಚಿಕೆಯಲ್ಲಿ ನಿರೀಕ್ಷಿಸಿ ...

ಕನ್ನಡ ಟೈಪ್ ಮಾಡೋದು ಹೇಗೆ

ಹೊರನಾಡ ಚೆಲುಮೆ - ಸೆಪ್ಟೆಂಬರ್ ಸಂಚಿಕೆಯಲ್ಲಿ google input tools ಉಪಯೋಗಿಸಿ ಕನ್ನಡದಲ್ಲಿ ಹೇಗೆ ಟೈಪ್ ಮಾಡಬಹುದು ಎಂದು ತಿಳಿದು ಕೊಂಡಿರಿ.

ಪೂರ್ಣ ಮಾಹಿತಿಗೆ ಸೆಪ್ಟೆಂಬರ್ ಸಂಚಿಕೆಯನ್ನು ನೋಡಲು ಈ ಲಿಂಕ್ ಕ್ಲಿಕ್ ಮಾಡಿ.

ಸಂಕ್ಷಿಪ್ತ ಮಾಹಿತಿ ಇಲ್ಲಿದೆ

ಗೂಗಲ್ ಇನ್ಪುಟ್ ಟೂಲ್ಸ್ (Google input tools) ಯೂನಿಕೋಡ್ ಆಧಾರಿತ ಒಂದ ತಂತ್ರಾಂಶ. ಇದನ್ನು ನಿಮ್ಮ ಕಂಪ್ಯೂಟರ್ ನಲ್ಲಿ install ಮಾಡಿದರೆ ಕನ್ನಡದಲ್ಲಿ ನೀವು ನೇರವಾಗಿ word, excel ಇತ್ಯಾದಿ office ಸಾಫ್ಟ್ವೇರ್ ಅಲ್ಲದೆ, ಸಮಾಜ ತಾಣಗಳಾದ ಫೇಸ್ಬುಕ್ , ಜಿ-ಪ್ಲಸ್ ಇತ್ಯಾದಿಗಳಲ್ಲೂ ಟೈಪ್ ಮಾಡಬಹುದು.

INSTALL ಮಾಡುವ ಮತ್ತು ಉಪಯೋಗಿಸುವ ವಿಧಾನ

1. http://www.google.com/inputtools/windows/index.html - ಈ ಲಿಂಕ್ ಕ್ಲಿಕ್ ಮಾಡಿ

   ಇರುವ ಹಲವಾರು ಭಾಷೆಗಳ ಲಿಸ್ಟ್ ನಲ್ಲಿ ಕನ್ನಡ ಕ್ಲಿಕ್ ಮಾಡಿ install ಮಾಡಿ.

   ಆಂಗ್ಲ ಭಾಷೆಯಲ್ಲಿ ಟೈಪ್ ಮಾಡುತ್ತಿದ್ದಾಗ ಕನ್ನಡ ಟೈಪ್ ಮಾಡಲು ಒಟ್ಟಿಗೆ CTRL + G ಕೀ ಒತ್ತಿ. ಆಗ ಆಂಗ್ಲದಿಂದ ಕನ್ನಡಕ್ಕೆ ಕೀಲಿಮಣೆ ಸಿದ್ಧವಾಗುತ್ತದೆ. ನಂತರ ನೀವು ಮತ್ತೆ ಆಂಗ್ಲ ಪದ ಬಳಸಬೇಕಾದರೆ ಮತ್ತೆ CTRL + G ಕೀ ಒಟ್ಟಿಗೆ ಒತ್ತಿ.

ಸೂಚನೆ: ಕೆಲವೊಮ್ಮೆ ಈ ಬಾಕ್ಸ್ ಕಾಣಿಸದಿದ್ದರೆ ಒಟ್ಟಿಗೆ ALT + SHIFT ಕೀ ಒತ್ತಿ

ಮುಖ್ಯಮಂತ್ರಿಗಳಿಗೊಂದು ಬಹಿರಂಗ ಪತ್ರ – ಮಾಸ್ಟರ್ ಹಿರಣ್ಣಯ್ಯ

॥ಶ್ರೀಮಾತಾ॥

"ಮಾನ್ಯ ಶ್ರೀ ಮುಖ್ಯಮಂತ್ರಿಯವರಿಗೆ ಒಂದು ಬಹಿರಂಗ ಪತ್ರ."

೧೦-೧೧-೨೦೧೩.

ಬೆಂಗಳೂರು.

ಮಾನ್ಯರೇ ಪ್ರಣಾಮಗಳು.

ನನ್ನ ನಿಮ್ಮ ಅಳಿಸಲಾರದ ಮೈತ್ರಿಯ ಭರವಸೆಯ ನಂಬಿ, ಆ ಸಲುಗೆಯಿಂದ, ವಯಸ್ಸಿನಲ್ಲಿ ಮಾತ್ರ ಹಿರಿಯನಾಗಿರುವ(ಮತ್ಯಾವುದರಲ್ಲೂ ಅಲ್ಲ) ನಾನು ಧೈರ್ಯದಿಂದ ಈ ಪತ್ರವನ್ನು ಬರೆದಿರುತ್ತೇನೆ-ತಪ್ಪಿದ್ದರೆ ಕ್ಷಮಿಸಿ. ನಿಮ್ಮ ಸುತ್ತಲೂ ಆವರಿಸಿರುವವರನ್ನು ಯಾರುಯಾರೋ, ಏನೇನೋ ಪರಿಭಾಷೆಗಳಲ್ಲಿ ಸಂಬೋಧಿಸಿ ಹೀಯಾಳಿಸಿದ್ದಾರೆ-ಅದನ್ನೆಲ್ಲಾ ನಿಮ್ಮ ಮೊಮ್ಮಕ್ಕಳ ತೊದಲು ಮಾತುಗಳೆಂದು(ಯಾಕೆಂದರೆ ನಿಮ್ಮ ಸುತ್ತಲಿನವರ ಮಾತುಗಳೆಲ್ಲಾ ಸಂಜೆಯಾಯ್ತೆಂದರೆ ತೊದಲುತ್ತದೆ ಬಿಡಿ)ಬಗೆದು ಕ್ಷಮಿಸಿಬಿಡಿ. ಯಾಕೆಂದರೆ ಸಾಮಾನ್ಯವಾಗಿ ಅನ್ಯರ ಹಣದಲ್ಲಿ ಏನೇ ಕುಡಿದರೂ ಸ್ವಲ್ಪ ಮಿತಿ ಮೀರುವುದು ಸಹಜವಲ್ಲವೇ? (ನನ್ನ ಹಳೇ ೩೨ ವರ್ಷಗಳ ಹಿಂದಿನ ಅನುಭವ).

ಗೆದ್ದು ಬಂದು ಮುಖ್ಯಮಂತ್ರಿ ಕುರ್ಚಿಯನ್ನು ಭಯ-ಭಕ್ತಿಗಳಿಂದ ಪೂಜಿಸಿ, ಪುರೋಹಿತರಿಗೆ ದಕ್ಷಿಣೆಯಿತ್ತು, ನಂತರ ಹತ್ತಿರುವ ಆ ಕುರ್ಚಿಗಾಗಿ ನೀವು ಪಟ್ಟ ಕಷ್ಟ, ಹೊತ್ತ ಹರಕೆಗಳು, ಬಿದ್ದೆದ್ದ ಪಾದಗಳು ಇವೆಲ್ಲವನ್ನೂ ಕಾಣದವರ್ಯಾರೂ ಇಲ್ಲ ಈ ನಮ್ಮ ಕರ್ನಾಟಕದಲ್ಲಿ. ಆದರೇನು ಮಾಡೋದು-ನಮ್ಮ ಜನಕ್ಕೆ ಬಹಳ ಮರವು. ಹೋದಬಾರಿ ಗೆಲ್ಲಿಸಿದವರ ಅನ್ಯಾಯಗಳ ಪಟ್ಟಿಯೇ ಕೈಲಿದ್ದರೂ, ಮರೆತು ಪುನಃಪುನಃ ಅವರನ್ನೇ ಗೆಲ್ಲಿಸಿ ಕಳುಹಿಸೋಲ್ವೇ ಹಾಗೆ, ನಿಮ್ಮ ಕಷ್ಟವನ್ನೂ ಮರೆತಿದ್ದಾರೆ ಬಿಡಿ. ಆದರೆ ಬಂದ ಕೂಡಲೇ ಯಾರನ್ನೂ ಕೇಳದೇ-ಹೈ ಕಮ್ಯಾಂಡ್ ಅನ್ನೂ ಸಹ, ಘೋಷಿಸಿದ ರೂ.ಒಂದಕ್ಕೆ ಒಂದು ಕೆ.ಜಿ.ಅಕ್ಕಿ, ಸೀಮೇ ಎಣ್ಣೆ, ಕುಡಿಯಲು ಅಗ್ಗದ ಸಾರಾಯಿ, ಬ್ಯಾಂಕಗಳ ಸಾಲಾಮನ್ನ ಅಬ್ಬಬ್ಬಾ ಎನು ಒಂದೇ ಎರಡೇ. ಅವೆಲ್ಲವನ್ನೂ ಕಮಕ್ಕಿಮಕ್ ಅನ್ನದೇ ಸ್ವೀಕರಿಸಿದ ಈ ಜನ, ಇಂದು ಒಂದೇ ಒಂದು "ಶಾದೀ ಭಾಗ್ಯ" ಅದೂ ಅಲ್ಪ ಸಂಖ್ಯಾತರಿಗೆ ಮಾತ್ರಾ, ಮೂಢನಂಬಿಕೆಗಳಿಗೆ ಮೂಗುದಾರ, ಅದೂ ಕೇವಲ ಹಿಂದೂ ಧರ್ಮದವರಿಗೆ ಮಾತ್ರಾ, ಅಂದ ಮಾತ್ರಕ್ಕೇ ಹೇಗೆ ತಿರುಗಿ ಬೀಳುತ್ತಿದ್ದಾರೆ ನೋಡಿ. ಮೊದಲಿನ ಜನಪರ ಆಶ್ವಾಸನೆಗಳಲ್ಲಿ ಅವರಿಗೆ ಲಾಭವಿದ್ದ ಕಾರಣ ಅವನ್ನು ಅಪ್ಪಿದರು-ಒಪ್ಪಿದರು. ಅದೇ ನಂತರದ ಮತಪರ ಆಶ್ವಾಸನೆಗಳಿಗೆ ಮಾತ್ರಾ ಊಹೂಂ,.ಒಪ್ಪೋಲ್ಲಾ. ಪಾಪಾ,.ನೀವು ನಿಮ್ಮ ಪಕ್ಷದ ಯೊಗಕ್ಷೇಮದ ಬಗ್ಗೆಯೂ ಚಿಂತಿಸುವುದು ತಪ್ಪೇ. ಅದರಲ್ಲೂ ಮೋದಿಯಂಥಾ ಮಹಾ ಪೈಲ್ವಾನನ ಮುಂದೆ ನಿಲ್ಲುದೆಂದರೆ ಸಾಕಷ್ಟು ತಯಾರಿ ಬೇಡವೇ? ನೋಡಿ ಇವನ್ನೆಲ್ಲಾ ಈ ಜನ ಯೋಚಿಸುವುದೇ ಇಲ್ಲಾ. ಎಂಥೆಂಥಾ ಅತಿರಥಮಹಾರಥರೆಲ್ಲಾ ಕೂತು, ನಿಂತು, ಮಲಗಿ, ಓಡಾಡಿ, ತಿಂದುಂಡು, ಕುಡಿದು ಕುಪ್ಪಳಿಸಿ, ಹಗಲು ರಾತ್ರಿಗಳೆನ್ನದೇ ವದ್ದಾಡಿ ಹೊರತಂದಿರುವ ಕರಡು ಮಸೂದೆಯೆಂದರೆ ಸಾಮಾನ್ಯವೇ? ಅದೊಂದು"ಪಂಚಮವೇದ"-ತಪ್ಪುತಪ್ಪು,.ವೇದದ ಮಾತೇ ತಪ್ಪು. ಅದೆಲ್ಲಾ ಬುದ್ದಿಗೇಡಿ ನನ್ಮಕ್ಕಳ ಪದಗಳು, ಅದು "ಮಾವೋಮಹಾಗ್ರಂಥ" ವನ್ನು ಈಜನ ಹೇಗೆ ತುಚ್ಚವಾಗಿ ಹೀಗಳಿಯುತ್ತಿದ್ದಾರೆ. ಇವರಿಗೆ ಮುಂದೆ ಕುಂಭೀಪಾಕ ನರಕವೇ ಘಟ್ಟಿ ಬಿಡಿ. ನಮ್ಮಪ್ಪ ಹೇಳೋನು,.:ಮಗನೇ ಆಡ್ಕೊಳ್ಳೋರಿಗೆ ಅವಕಾಶ ಕೊಟ್ಟು, ನೀ ಮಾಡ್ತಿರೋ ಕೆಲಸ ಮಾಡ್ಕೊಂಡು ಹೋಗ್ತಿರೂಂತಾ". ನೋಡಿ,.ಆಮಾತು ಈಗ ನಿಮಗೆ ಕೆಲಸಕ್ಕೆ ಬಂದಿದೆ. ಅಯ್ಯೋ ರಾಮಾ,.ಈಗ ಅನ್ನೋರೆಲ್ಲಾ ಅವತ್ತು ನೀವು ಈ ಪದವಿಗೆ ಅಲವತ್ತು ಕೊಳ್ಳುತ್ತಿದ್ದಾಗ, ಯಾರಾದರೂ ಬಂದು ಕೊಡಿಸಿದರೇ ಹೇಳಿ? ಈಗನ್ನೋಕೆ ಬರ್ತಾರೆ,.ನಾಚಿಕೆ ಬಿಟ್ಟೋರು. ತನ್ನೀ ಸ್ವಾಮೀ,.ಮೂಢನಂಬಿಕೆಗಳಿಗೆ ಕಡಿವಾಣ, ಆಗ ಟಿವಿ ಗಳಲ್ಲಿ ರಾಮಾಯಣ, ಮಹಾಭಾರತ, ಬಸವೇಶ್ವರ, ಕನಕದಾಸ, ಪುರಂದರದಾಸ, ಪೌರಾಣಿಕ ಸಿಮಾಗಳು, ಹಿಂದೂ ದೇವರನಾಮಗಳು, ಭಕ್ತಿ ಗೇತೆಗಳು ಇವೆಲ್ಲವನ್ನೂ ನಿಷೇಧಿಸಬಹುದು. ಎಷ್ಟೇ ಆಗಲೀ, ಕೇವಲ ತಮ್ಮೊಬ್ಬರ ಸೋಲನ್ನು ಸಹಿಸಲಾರದ ಮಾತಾಜಿ ಇಂದಿರಾಜೀಯವರು, ಇಡೀ ದೇಶಕ್ಕೇ "ತುರ್ತು ಪರಿಸ್ಥಿತಿ"ಘೊಷ್ಸಿ-೧೮ ಮಾಸಗಳು ಪಾಲಿಸಿಕೊಂಡು ಬರುತ್ತಾ, "ಇಂದು" ಅಂದವರನ್ನೆಲ್ಲಾ ಜೈಲಿಗೆ ಕಳುಹಿಸಿದ ಪಕ್ಷವಲ್ಲವೇ ನಿಮದು. ಈ ನಾಡಲ್ಲಿ ನೀವಿಷ್ಟನ್ನು ಮಾಡುವುದನ್ನು ಅದ್ಯಾರು ತಡೆಯುತ್ತಾರೋ ನಾನು ಮತ್ತು ಅಖಂಡ ಕರ್ನಾಟಕದ ಆರು ಕೋಟಿ ಕನ್ನಡಿಗರಲ್ಲಿರುವ ಕೇವಲ ೬-೮ ಜನ "ಬುದ್ಧಿ ಜೀವಿಗಳು" ಸೇರಿ ಅವರನ್ನೆಲ್ಲಾ ಒಂದು ಕೈ-ಹಸ್ತ ನೋಡಿಕೊಳ್ಳುತ್ತೇವೆ,.ನೀವು ಕಾರ್ಯೋನ್ಮುಖರಾಗಿ. ಮೇರಾ ಭಾರತ್ ಮಹಾನ್,.ಹಮಾರಾ ಸಿಎಂ ದಿವಾನ್.

ನಿಮ್ಮ ಹಿತೈಷಿ,.

ಮಾಸ್ಟರ್ ಹಿರಣ್.

ಕ್ಯಾನ್ಸರ್ ನಿಂದ ರಕ್ಷಿಸುವ ಆಹಾರಪದಾರ್ಥಗಳು

ರಾಜಿ ಜಯದೇವ್ (Accredited Practising Dietician)
Mrs Raji Jayadev, B.Sc (Hons) Dip Nutr & Diet (Syd)

ಆಸ್ಟ್ರೇಲಿಯಾದ ಜನರಲ್ಲಿ ದೊಡ್ಡ ಕರುಳಿನ ಕ್ಯಾನ್ಸರ್ ಸರ್ವೇ ಸಾಧಾರಣವಾಗಿಬಿಟ್ಟಿದೆ. ಇದಕ್ಕೆ ಕಾರಣ ಸಾಕಷ್ಟು ಫೈಬರ್ (ನಾರು, ಸಿಪ್ಪೆ, ಹೊಟ್ಟು) ಇರುವ ಆಹಾರ ಪದಾರ್ಥಗಳನ್ನು ಉಪಯೋಗಿಸದಿರುವುದು ಎಂದು ಸಾಬೀತಾಗಿದೆ. ಫೈಬರ್, ಕ್ಯಾನ್ಸರ್ ತಡೆಗಟ್ಟುವ ಕೆಲಸ ಹೇಗೆ ಮಾಡುತ್ತದೆ ಎಂದರೆ:

೧. ಇದು ಮಲವಿಸರ್ಜನೆ ಸುಸೂತ್ರವಾಗಿ ನಡೆಯುವಂತೆ ಮಾಡುತ್ತದೆ. ಈ ಮೂಲಕ ನಮ್ಮ ಹೊಟ್ಟೆ ಮತ್ತು ಕರುಳು ಶುದ್ಧವಾಗಿರುವಂತೆ ನೋಡಿಕೊಳ್ಳುತ್ತದೆ.
೨. ನಮ್ಮ ದೇಹದಲ್ಲಿ ಉಂಟಾಗುವ ಅನಗತ್ಯ ವಸ್ತುಗಳನ್ನು ಮತ್ತು ವಿಷ ಪದಾರ್ಥಗಳನ್ನು ಹೊರಹಾಕುತ್ತದೆ (ಕಸಪೊರಕೆಯ ಕೆಲಸ ಮಾಡುತ್ತದೆ).
೩. ಆರೋಗ್ಯಕ್ಕೆ ಪೂರಕವಾದ ಬ್ಯಾಕ್ಟೀರಿಯಗಳು **(probiotics)** ನಮ್ಮ ಜೀರ್ಣಾಂಗಗಳಲ್ಲಿ ಬೆಳೆಯಲು ಸಹಾಯಮಾಡುತ್ತದೆ.

ದವಸ ಧಾನ್ಯಗಳಲ್ಲಿ ಮತ್ತು ಕೊಬ್ಬಿನ ಬೀಜಗಳಲ್ಲಿ ಎಲ್ಲಾ ವಿದದ ಫೈಬರ್ (soluble, insoluble, resistant starch) ಯಥೇಚ್ಛವಾಗಿವೆ. ವಿಟಮಿನ್ಸ್, ಮಿನರಲ್ಸ್ ಮತ್ತು ಕ್ಯಾನ್ಸರ್ ನಿಂದ ರಕ್ಷಣೆ ಒದಗಿಸುವ phyto-chemicals ಕೂಡ ಹೆಚ್ಚಿನ ಮಟ್ಟದಲ್ಲಿದೆ.

ಕ್ಯಾನ್ಸರ್ ನಿಂದ ರಕ್ಷಿಸುವ ಆಹಾರ ಪದಾರ್ಥಗಳು - ದವಸ ಧಾನ್ಯಗಳು ಮತ್ತು ಕೊಬ್ಬಿನ ಬೀಜಗಳು

ದವಸ ಧಾನ್ಯಗಳು ಯಾವುವೆಂದರೆ - ಅಕ್ಕಿ, ರಾಗಿ, ಜೋಳ, ಬಾರ್ಲಿ, ಗೋದಿ, ಸಜ್ಜೆ, ಓಟ್ಸ್; ಎಲ್ಲಾ ವಿದವಾದ ಬೇಳೆ (ಉದಾ: ತೊಗರಿಬೇಳೆ, ಕಡ್ಲೆಬೇಳೆ ಇತ್ಯಾದಿ) ಮತ್ತು ಕಾಳುಗಳು (ಉದಾ: ಕಡಲೆಕಾಳು, ಹಲಸಂದೇಕಾಳು ಇತ್ಯಾದಿ).

ಬಿಳಿ ಅಕ್ಕಿ, ಬಿಳಿ ಬ್ರೆಡ್, cornflakes, ಮೈದಾಹಿಟ್ಟು, ಜರಡಿಯಾಡಿದ ಗೋದಿಹಿಟ್ಟು ಮತ್ತು ಅತಿಯಾಗಿ ಸಂಸ್ಕರಿಸಿದ (refined and heavily processed) ಆಹಾರ ಪದಾರ್ಥಗಳು ನಾರುರಹಿತವಾಗಿರುತ್ತವೆ. ಇವುಗಳಲ್ಲಿ phyto-chemicals ಕೂಡ ನಾಶವಾಗಿರುತ್ತದೆ.

ತೌಡುಯುಕ್ತ ಕೆಂಪಕ್ಕಿ, ಕಂದುಬಣ್ಣದ ಅಕ್ಕಿ, ಕುಸುಬಲಕ್ಕಿ, ಹೊಟ್ಟಿನೊಂದಿಗಿರುವ ಗೋದಿಹಿಟ್ಟು (೧೦೦% ಅಟ್ಟ) ಉಪಯೋಗಿಸಿ. wholemeal ಅಥವಾ wholegrain ಬ್ರೆಡ್ ಮತ್ತು cereals ಗಳನ್ನು ಖರೀದಿಸಿ, ಬೇಳೆ ಮತ್ತು ಕಾಳುಗಳನ್ನು ಹೆಚ್ಚಾಗಿ ಬಳಸಿ. ಪ್ರತಿದಿನ ೨೦-೩೦ಗ್ರಾ ಕೊಬ್ಬಿನ ಬೀಜಗಳನ್ನು (ಉದಾ: ಕಡ್ಲೆಕಾಯಿ, ಸೀಕುಂಬಳಬೀಜ) ಉಪಯೋಗಿಸಿ. ಇವುಗಳು ಕ್ಯಾನ್ಸರ್ ಒಂದೇ ಅಲ್ಲ, ಡಯಾಬಿಟಿಸ್ ಮತ್ತು ಹೃದಯರೋಗಗಳನ್ನು ಕೂಡ ತಡೆಹಿಡಿಯುತ್ತವೆ.

ಕಡೆಯ ಕಿವಿ ಮಾತು.

- ಹಣ್ಣು ಮತ್ತು ತರಕಾರಿಗಳನ್ನು ಹೆಚ್ಚಾಗಿ ಸೇವಿಸಿ. ಸೀದು ಹೋದ ಆಹಾರಗಳನ್ನು ಉಪಯೋಗಿಸಬೇಡಿ.
- ಉಪ್ಪಿನ ಪದಾರ್ಥಗಳನ್ನೂ, ಸಂಸ್ಕರಿತ ಆಹಾರಗಳನ್ನೂ, ಹೆಚ್ಚು ಕೊಬ್ಬು ಮತ್ತು ಸಕ್ಕರೆಯಿಂದ ಕೊಡಿದ, ಅಂಗಡಿಯಲ್ಲಿ, ರೆಸ್ಟೋರೆಂಟ್ ನಲ್ಲಿ ಕೊಂಡ ಊಟ ತಿಂಡಿಗಳನ್ನು ವಿಶೇಷ ಸಮಾರಂಭಗಳಲ್ಲಿ ಮಾತ್ರ ಉಪಯೋಗಿಸಿ.
- ಮಾರ್ಜರಿನ್ ಬದಲು peanut butter ಬಳಸಿ.
- ಪಾಲಿಅನ್ಸ್ಯಾಚುರೇಟೆಡ್ (ಉದಾ: sunflower) ಎಣ್ಣೆಯ ಬದಲು ಮಾನೋಅನ್ಸ್ಯಾಚುರೇಟೆಡ್ (monounsaturated) ಎಣ್ಣೆಯನ್ನು (ಉದಾ: ಕಡಲೇಕಾಯಿ ಎಣ್ಣೆ, ಆಲೀವ್ ಎಣ್ಣೆ) ಉಪಯೋಗಿಸಿ.
- ಒಮೀಗಾ ೩ ಕೊಬ್ಬನ್ನು ಹೊಂದಿರುವ ಆಹಾರಪದಾರ್ಥಗಳನ್ನು (ಅಗಸೆ, ವಾಲ್ನಟ್, ಸೋಯಾಬೀಜ, ಸೊಪ್ಪು, ಮೀನು) ಹೆಚ್ಚು ಬಳಸಿ.
- ತಾಜಾ ಆಹಾರವನ್ನು ಬಳಸಿ. ವಿಟಮಿನ್ ಮಾತ್ರೆಗಳ ಮೊರೆಹೊಗಬೇಡಿ.
- ದಿನಕ್ಕೆ ಕನಿಷ್ಟ 30 ನಿಮಿಷ ಅಥವಾ ವಾರಕ್ಕೆ 3-4 ಗಂಟೆ ವ್ಯಾಯಾಮ ಮಾಡಿ.

ಪ್ರತಿದಿನ 2.5 ಗ್ರಾಂ ಅರಶಿನದ ಬಳಕೆ ಕ್ಯಾನ್ಸರ್ ಜೀವಕಣಗಳನ್ನು ನಾಶಮಾಡುತ್ತದೆ ಎಂದು ಕೆಲವು (ಬೆರಳೆಣಿಕೆಯಷ್ಟು) ಸಂಶೋಧನೆಗಳಿಂದ ತಿಳಿದುಬಂದಿದೆ.

ನಾವು ಸೇವಿಸುವ ಆಹಾರದಿಂದ ಆರೋಗ್ಯ ಮತ್ತು ಸಂತೃಪ್ತಿಗಳು ಸಿಗಲಿ

ಹೆಚ್ಚಿನ ಮಾಹಿತಿಗೆ: www.cancer.org.au

ವೀಕ್ಷಿಸಿ: The Role of Natural defences in Preventing and Treating cancer by university of California Television. www.youtube.com/watch?v=XaDt3AJQ98c

ಮುಂದಿನ ತಿಂಗಳು: ಕ್ಯಾನ್ಸರ್ ಚಿಕಿತ್ಸೆ ಪಡೆಯುತ್ತಿರುವವರು ಉಪಯೋಗಿಸಬೇಕಾದ ಆಹಾರಗಳು

ರಾಂ ರಾಮ

ಇದು ಹಾಸ್ಯ ಪುಟ

ರಾಮನಾಥ್
ಭಾಷಣಕಾರರು, ಹಾಸ್ಯ ಲೇಖಕರು

ಬೀಚೆಯೊಡನೆ ಒಂದು ಸಂದರ್ಶನ

ಈ ನಿದ್ರಾದೇವಿಯೇ ಹಾಗೆ. ಹಾಸಿಗೆಯ ಮೇಲೆ ಬಿದ್ದು ಹೊರಳಾಡಿದರೂ ಬರುವುದಿಲ್ಲ, ಸಭೆ, ಸಮಾರಂಭ, ತರಗತಿ, ಸಂಗೀತ ಕಚೇರಿ, ಹಾಸ್ಯೋತ್ಸವಗಳಲ್ಲಿ ಆಸಕ್ತಿಯಿಂದ ಕುಳಿತಿದ್ದರೆ ತಕ್ಷಣ ವಕ್ಕರಿಸಿಬಿಡುತ್ತಾಳೆ. ಅಂದೂ ಅಷ್ಟೆ; ಗಡದ್ದಾಗಿ ಊಟ ಸವಿದು ಈಸಿಛೇರ್ನಲ್ಲಿ ಹಾಗೇ ಹಿಂದಕ್ಕೆ ಒರಗಿದ್ದೆ. ನಿದ್ರಾದೇವಿ ಅರಿವೇ ಆಗದಂತೆ ಬಂದು ಆವರಿಸಿದ್ದಳು.

"ಗಸಗಸೆ ಪಾಯಸಕ್ಕೇ ಫುಲ್ ಟೈಟ್ ಏನೋ?" ಕಿವಿಯಲ್ಲೇ ಮೊಳಗಿತು ಪ್ರಶ್ನೆ.

ನಾನು ಮಗ್ಗುಲು ಬದಲಿಸಿದೆ.

"ಎಲೈ ಜಗತ್ತೇ ಒಂದು ಬೆಡ್‌ರೂಮ್, ಕುಳಿತ ಕುರ್ಚಿಗಳೆಲ್ಲಾ ಮಂಚ ಎಂದು ತಿಳಿದಿರುವ ಮಂತ್ರಿಬುದ್ಧಿಯವನೇ, ಏಳುವಂಥಾತ್ತನಾಗು"

ದನಿಯಲ್ಲಿ ಎಷ್ಟು ಅಧಿಕಾರ ಇದೆಯೋ ಅಷ್ಟೇ ಆದ್ರತೆ. ಅಂತೂ ಇಂತೂ ಎಡ್ಯೂರಪ್ಪನವರು ಕುರ್ಚಿ ಬಿಟ್ಟಾಗ ಪಟ್ಟಷ್ಟೇ ಸಂಕಟದಿಂದ ನಾನೂ ಕಣ್ಣುಬಿಟ್ಟೆ.

ಹೌಹಾರಿ ಎದ್ದು ಕುಳಿತೆ.

ಎದುರಿಗೆ ನಿಂತಿದ್ದವರು ಸ್ವಯಂ, ಸಾಕ್ಷಾತ್, ಖುದ್ದು, ಬೀಚೆಯೇ! ಅದೇ ಜುಬ್ಬ, ಅದೇ ಪೈಪ್, ಅದೇ ಗಡ್ಡ, ಅದೇ ವಿಡಂಬನೆ!

'ಸಾರ್! ನೀವು!!!?'

'ಮತ್ತೆ ಮೂರ್ಛೆ ಹೋಗಬೇಡವೋ! ಏಪ್ರಿಲ್ ಒಂದು ನಿನ್ನ ಹುಟ್ಟುಹಬ್ಬವಲ್ಲವೇ, ವಿಷ್ ಮಾಡಕ್ಕೆ ಬಂದೆ"

'ನನ್ನ ಡೇಟ್ ಆಫ್ ಬರ್ತ್ ನಿಮಗೆ ಹೇಗೆ ಗೊತ್ತು?'

"ಎಲ್ಲಾ ಮೂರ್ಖರೂ ಏಪ್ರಿಲ್ ಒಂದರಂದೇ ಹುಟ್ಟಿದ್ದು"

ಒಪ್ಪಿದೆ. ಬೀಚೆಯಿಂದ ಮೂರ್ಖ ಎನ್ನಿಸಿಕೊಳ್ಳುವುದು ಅಪ್ಲಿಕೇಶನ್ ಮೂಲಕ ಪಡೆದ ರಾಜ್ಯಪ್ರಶಸ್ತಿಗಿಂತಲೂ ಶ್ರೇಷ್ಠವಾದ ಪ್ರಶಸ್ತಿ!

"ಎಲೈ ಶಿಷ್ಯೋತ್ತಮಾ, ಐಶ್ವರ್ಯ ರೈಳನ್ನು ಕಂಡ ಪ್ರೊಫೆಸರ್ ಕೃಷ್ಣೇಗೌಡರಂತೆ ಸುಮ್ಮನೆ ಮಿಕಿಮಿಕಿ ನೋಡಬೇಡ. ನನ್ನ ಸಂದರ್ಶನ ಬೇಕೆಂದಿದ್ದೆಯಲ್ಲಾ, ಅದೇನು ಕೇಳ್ತೀಯೋ ಕೇಳು" ಆದೇಶಿಸಿದರು ನೀವು ಕೇಳಿದಿರಿ? ಯ ಉತ್ತರ ಭೂಪ!

"ನಿಮ್ಮನ್ನು ಕಂಡು ನನಗೆ ಆನಂದ, ಸಂತೋಷ, ಖುಷಿ, ಅಷ್ಟೇ ಅಲ್ಲದೆ ಸಂತಸವೂ ಆಗುತ್ತಿದೆ. ನೀವು ಸ್ವರ್ಗವನ್ನು ಬಿಟ್ಟು ಭೂಮಿಗೆ ಬರಲು ಕಾರಣವೇನು?"

"ಬ್ರೇಕಿಂಗ್ ನ್ಯೂಸ್"

"ಬ್ರೇಕಿಂಗ್ ನ್ಯೂಸೇ? ಅದು ಹೇಗೆ?"

"ಸ್ವರ್ಗದಲ್ಲಿ ಏನಿದೆಯಯ್ಯಾ? ಅದೇ ಊರ್ವಶಿ, ಅದೇ ರಂಬೆ, ಅದೇ ಕೊಂಬೆ. ಇಲ್ಲಾದರೆ ಕ್ಷಣಕ್ಷಣಕ್ಕೂ ಬ್ರೇಕಿಂಗ್ ನ್ಯೂಸ್, ಕ್ಷಣಕ್ಷಣಕ್ಕೂ ರೋಮಾಂಚನ"

"ನಿಮ್ಮ ಕಾಲದಲ್ಲಿ ಬ್ರೇಕಿಂಗ್ ನ್ಯೂಸ್ ಇರಲಿಲ್ಲವೇ?"

"ಇತ್ತಲ್ಲಾ... ಹುಡುಗಿಯನ್ನು ಚುಡಾಯಿಸಿದ ಕಾಮಣ್ಣನ ಕಾಲು ಹುಡುಗಿಯ ಅಣ್ಣನಿಂದ ಬ್ರೇಕ್ ಆದುದೇ ಆಗಿನ ಕಾಲದ ಬ್ರೇಕಿಂಗ್ ನ್ಯೂಸ್"

"ಈಗ?"

"ನಟಿ ಗರ್ಭಿಣಿಯಾದರೆ ಬ್ರೇಕಿಂಗ್ ನ್ಯೂಸ್! ತೆಂಡೊಲ್ಕರ್ ಸೊನ್ನೆ ಹೊಡೆದರೆ ಬ್ರೇಕಿಂಗ್ ನ್ಯೂಸ್! ಅಲ್ಲಯ್ಯಾ, ಇವೆಲ್ಲಾ ಬ್ರೇಕಿಂಗ್ ನ್ಯೂಸ್ ಅಲ್ಲ, ಹಾರ್ಟ್ ಬ್ರೇಕಿಂಗ್ ನ್ಯೂಸ್ ಎಂದು ತಿಳಿಯಬಾರದೇನಯ್ಯಾ?"

"ಹಾರ್ಟ್ ಬ್ರೇಕಿಂಗ್? ಏಕೆ?"

"ನಟಿಗೆ ಮಗುವಾಗದಿದ್ದರೆ ಅವಳ ಡೈವೋರ್ಸ್‌ಗೆ ಕಾದು ಮದುವೆ ಆಗುವ ಕನಸು ಕಾಣುವ ಭೂಪರಿದ್ದಾರಯ್ಯಾ. ಅವರ ಹಾರ್ಟ್ ಬ್ರೇಕ್ ಆಗುತ್ತದಲ್ಲಾ"

"ತೆಂಡುಲ್ಕರ್ ಸೊನ್ನೆಗೆ?"

"ಜಾಹಿರಾತುದಾರರು, ಪ್ರಾಯೋಜಕರ ಹಾರ್ಟ್ ಬ್ರೇಕಿಂಗ್"

"ಬೀಚೆಯವರೇ, ಆಗಿನ ಕಾಲದ ಸುದ್ದಿಗಳಿಗೂ ಈಗಿನ ಕಾಲದ ಸುದ್ದಿಗಳಿಗೂ ಏನು ವ್ಯತ್ಯಾಸ?"

"ಆಗ ಲಂಚ ಹೊಡೆದವನನ್ನು ಅಯೋಗ್ಯ ಎನ್ನುತ್ತಿದ್ದರು. ಈಗ ಲಂಚ ಪಡೆಯದವನನ್ನು 'ಒಮ್ಮೆ ನಿಮ್ಹಾನ್ಸ್‌ನಲ್ಲಿ ಟೆಸ್ಟ್ ಮಾಡಿಸಿ' ಎನ್ನುತ್ತಾರೆ"

"ನಿಮ್ಮ ಸಾಹಿತ್ಯದಲ್ಲಿ ಅದೆಂತಹ ಮೊನಚು, ಅದೆಂತಹ ವಿಡಂಬನೆ. ನಿಮ್ಮ 'ಅಂದನಾ ತಿಂಮ' ಸಾಹಿತ್ಯ ಲೋಕದ ಮೈಲಿಗಲ್ಲು"

"ಹಾಗಾದರೆ ಮಿಕ್ಕವು ಮೈಲಿಗೆ ಮತ್ತು ಗಲ್ಲು ಎನ್ನು"

"ಅದೇಕೆ ಹಾಗೆನ್ನುವಿರಿ?"

"ದಾಸಕೂಟ ಜನಿವಾರಕ್ಕೆ ಮೈಲಿಗೆ, ಖಾದಿಸೀರೆ ಶಿವದಾರಕ್ಕೆ ಮೈಲಿಗೆ. ಇನ್ನು ಎಷ್ಟೋ ಬರಹಗಳು ವಿವಿಧ ವರ್ಗಗಳ ಜನಕ್ಕೆ ಮೈಲಿಗೆ ಅಥವಾ ಗಲ್ಲು" ಎನ್ನುತ್ತಾ ನಗತೊಡಗಿದರು ಬೀಚೆ. ಅದೇನು ನಗೆ! ರೆಕಾರ್ಡ್ ಮಾಡಿಕೊಂಡಿದ್ದಿದ್ದರೆ ನಾಲ್ಕಾರು ಚಾನಲ್‌ಗಳಿಗೆ ಲಾಫ್ ಟ್ರ್ಯಾಕ್ ಆಗಿ ಮಾರಬಹುದಿತ್ತು!

"ಅದೇಕೆ ಅಷ್ಟು ಮೊನಚಾಗಿ ಬರೆಯುತ್ತಿದ್ದಿರಿ?"

ಶ್ರೀ ರಾಮನಾಥ್ ಅವರು ಉತ್ತರಿಸುವ "ನೀವು ಕೇಳಿದಿರಿ" ಬ್ಲಾಗ್ನಲ್ಲಿ ಲಭ್ಯ. ಕೆಳಗಿನ ಲಿಂಕ್ ಕ್ಲಿಕ್ ಮಾಡಿ

ನೀವು ಕೇಳಿದಿರಿ

ಮುಂದಿನ ಪುಟ ನೋಡಿ

“ಪೊಯೆಟ್ ಈಸ್ ದ ಅಂಬಾಸಿಡರ್ ಟು ದ ವರ್ಲ್ಡ್ ಕಣಯ್ಯಾ!”. ಜಗತ್ತಿಗೇ ರಾಯಭಾರಿ ಅವನು. ಇಡೀ ಜಗತ್ತನ್ನು ಸರಿಪಡಿಸುವ ಜವಾಬ್ದಾರಿ ಕವಿಗೆ ಇರುತ್ತದೆ”

“ಈಗಿನ ಕವಿಗಳು ಹಾಗಿದ್ದಾರೇನು?”

“ಪಾಪ! ಈಗಿನ ಹಲವಾರು ಕವಿಗಳು ಒಳ್ಳೆಯ ಟೈಲರ್ಗಳಾಗಬಹುದಿತ್ತು”

“ಅದು ಹೇಗೆ?”

“ಗದ್ಯವನ್ನು ಅಳತೆಗೆ ತಕ್ಕಂತೆ ಕತ್ತರಿಸಿ, ಒಂದರ ಕೆಳಗೆ ಒಂದನ್ನಿಟ್ಟು ಸೊಗಸಾಗಿ ಹೊಲಿಗೆ ಹಾಕುತ್ತಾರೆ”

“ಅಂದಿನ ಕನ್ನಡಕ್ಕೂ ಇಂದಿನ ಕನ್ನಡಕ್ಕೂ ಏನು ವ್ಯತ್ಯಾಸ ಕಂಡಿರಿ?”

“ನಾನು ಬಳಸಿದ್ದು ನಡುಗನ್ನಡ”

“ಈಗಿನದು?”

“ನಡುವಿನ ಕೆಳಗಿನ ಕನ್ನಡ!”

“ನೀವು ರಾಜಕಾರಣವನ್ನು ಹತ್ತಿರದಿಂದ ಕಂಡು ಟೀಕಿಸಿದವರು. ಈಗಿನ ರಾಜಕಾರಣದ ಬಗ್ಗೆ...?”

“ಈಗಿನದೇ ಬೆಸ್ಟ್ ಕಣಯ್ಯಾ. ಎಂತೆಂತಹ ಕಲಾವಿದರಿದ್ದಾರಯ್ಯಾ ಈಗ! ಬಟ್ಟೆ ಹರಿದುಕೊಂಡು ಕಿರುಚುವವನೊಬ್ಬ, ‘ಏನೇ ಬರಲಿ, ಕುರ್ಚಿ ಇರಲಿ’ ಎಂದು ಕೀರಲುವವನೊಬ್ಬ, ‘ಇಳಿದು ಬಾ ಸಿಎಂ ಇಳಿದು ಬಾ’ ಎಂಬ ಒಂದೇ ರಾಗ ಹಾಡುವವನೊಬ್ಬ... ಆಗಿನವರು ಒಬ್ಬರೂ ಸರಿ ಇರಲಿಲ್ಲವಯ್ಯಾ, ಮರ್ಯಾದೆಗೆ ಅಂಜುತ್ತಿದ್ದ ದಡ್ಡರು ಅವರು!”

“ಈಗಿನವರು?”

“ಈಗಿನವರ ದೃಷ್ಟಿಕೋನವೇ ಬೇರೆ. ಅಧಿಕಾರ ಇರುವವವರೆಗೆ ಮಜ, ಕಳೆದುಕೊಂಡಾಗ ಸಜ. ಈ ಸಜ ಮತ್ತು ಮಜದ ಕೊಲಾಬೊರೇಷನ್ನನ್ನೇ ಸಮಾಜ ಎಂದುಕೊಂಡಿದ್ದಾರೆ!” ಎನ್ನುತ್ತಾ ತಮ್ಮ ಪೈಪ್‌ನಿಂದ ಹೊಗೆ ಎಳೆದೆಳೆದು ಬಿಟ್ಟರು.

“ಈಗ ನನ್ನ ಬಗ್ಗೆ ಪುಸ್ತಕ ಬರೆದರೆ ಪುಸ್ತಕದ ಹೆಸರೇನಿಡುತ್ತಾರೆ ಗೊತ್ತೇನಯ್ಯಾ?” ಕೇಳಿದರು ಬೀಚೆ

“ಏನು?”

“ಹುಕ್ಕಾ...ಬುಕ್ಕಾ...?”

“ಹಹ್ಹಹ್ಹ! ಗುರುಗಳೇ, ನೀವೇ ಈಗ ಬರೆದರೆ ಮತ್ತೊಮ್ಮೆ ‘ಅಂದನಾ ತಿಂಮ’ ಬರೆಯುವಿರಾ?”

“ನೊಂದನಾ ತಿಂಮ’ ಬರೆಯುತ್ತೇನೆ”

“ಏಕೆ?”

“ನೋವು, ಗಲಭೆ, ವಂಚನೆಗಳಿದ್ದರೆ ಸೀರಿಯಲ್ ನಿರ್ಮಾಪಕರು ಒಳ್ಳೆಯ ರೇಟ್ ಕೊಡುತ್ತಾರೆ. ಪುಸ್ತಕವೂ ಹೆಚ್ಚು ಮಾರಾಟವಾಗುತ್ತದೆ”

“ನೀವು ಹಾಸ್ಯ ಸಾಹಿತಿಗಳೆಂದೇ ಖ್ಯಾತಿ ಪಡೆದಿದ್ದೀರಿ. ಕರ್ನಾಟಕದಲ್ಲಿ ಹಾಸ್ಯದ ಅಲೆ ಹುಟ್ಟಿದ್ದೇ ನೀವು, ಕೈಲಾಸಂರಿಂದ ಎನ್ನಬಹುದು. ಈಗಿನ ಕಾಲದ ಹಾಸ್ಯ ಭಾಷಣದ ಬಗ್ಗೆ ನಿಮ್ಮ ಅಭಿಪ್ರಾಯವೇನು?”

“ಆಗ ಹಾಸ್ಯ ಹಾಸ್ಯದಂತಿತ್ತು. ಈಗ ಹಾಸ್ಯ ಸಂಗೀತದಂತಿದೆ”

“ಸ್ವಲ್ಪ ಬಿಡಿಸಿ ಹೇಳಿ ಸರ್, ಪ್ಲೀಸ್”

“ತಥಾಸ್ತು. ಕೇಳುವಂಥಾತ್ತನಾಗು. ಸಂಗೀತಗಾರರು ಯಾರೋ ಬರೆದದ್ದನ್ನು ಹಾಡುತ್ತಾರೆ. ಹಾಸ್ಯ ಭಾಷಣಿಗರೂ ಅಷ್ಟೆ. ಅವರೂ ಹೇಳಿದ್ದನ್ನೇ ಹೇಳುತ್ತಾರೆ, ಇವರೂ ಅಷ್ಟೆ. ಅವರೂ ಕೊರೆತಕ್ಕೆ ತೊಡಗಿದರೆ ಗಂಟೆಗಟ್ಟಲೆ, ಇವರೂ ಅಷ್ಟೆ. ಇಬ್ಬರಲ್ಲೂ ಸ್ವಂತಿಕೆ ಮಳೆಸೀನ್ ಚಿತ್ರನಟಿಯ ಬಟ್ಟೆಯಂತಿದೆ”

“ಎಂದರೆ?”

“ಇದೆ ಎಂದರೆ ಇದೆ, ಇಲ್ಲ ಎಂದರೆ ಇಲ್ಲ!”

“ಹಾಸ್ಯದ ಬಾಬ್ತನ್ನು ಅತ್ತ ಇಟ್ಟು ಧರ್ಮದ ವಿಷಯಕ್ಕೆ ಬರೋಣ. ನಿಮ್ಮ ಕಾಲದ ಮಠಾಧೀಶರಿಗೂ ಈಗಿನ ಹಲವು ಮಠಾಧೀಶರಿಗೂ ಏನು ವ್ಯತ್ಯಾಸ?”

“ಆಗ ಎಲ್ಲವನ್ನೂ ತ್ಯಜಿಸಿದವರು ಮಾತ್ರ ಮಠದಯ್ಯಗಳಾಗುತ್ತಿದ್ದರು. ಈಗ ಎಲ್ಲವನ್ನೂ ತ್ಯಜಿಸುವ ಬದಲಿಗೆ ಕೇವಲ ಮೂರು ಬಿಟ್ಟವರೂ ಸಹ ಮಠಾಧೀಶರಾಗಬಹುದು”

“ಇಂದಿನ ಯುವಕರು ಎತ್ತ ಸಾಗಿದ್ದಾರೆ?”

“ಅಂದಿನ ಯುವಕರಂತೆಯೇ ಯುವತಿಯರತ್ತ ಸಾಗಿದ್ದಾರೆ”

“ಇಂದಿನ ಚಿತ್ರಗಳ ಬಗ್ಗೆ ಏನು ಹೇಳುವಿರಿ?”

“ಅದ್ಭುತ ಸಾಹಿತ್ಯ ಕಣಯ್ಯಾ. ನಮಗಾರಿಗೂ ಕತ್ತಲಲ್ಲಿ ಕರಡಿಗೆ ಜಾಮೂನು ತಿನ್ನಿಸಬಾರದು ಎಂದು ತಿಳಿದೇ ಇರಲಿಲ್ಲ! ಅಪ್ಪ ಲೂಸಾ, ಅಮ್ಮ ಲೂಸಾ ಎಂದು ಕೇಳುವುದೂ ಸಾಹಿತ್ಯ ಎಂದು ತಿಳಿದಿರಲಿಲ್ಲ. ಇರುವುದೆಲ್ಲವ ಬಿಟ್ಟು ಇರದುದರ ಕಡೆಗೆ ತುಡಿಯುವುದೇ ಜೀವನ ಎನ್ನುತ್ತಾರೆ. ಇವರೂ ಅಷ್ಟೆ. ಇರುವ ಬುದ್ಧಿಯನ್ನೆಲ್ಲಾ ಬಿಟ್ಟು ಅನರ್ಥದ ಕಡೆಗೇ ವಾಲಿದ್ದಾರೆ. ಭೇಷ್ ಕಣಯ್ಯಾ”

ಸುಮ್ಮ ನಕ್ಬಿಡಿ

ಹೌದೂ ಸಾರ್ ಗಾಡಿ ಅಂದ್ರೆ ಬರೀ ಬಾಡಿ ಮಿಕ್ಕಿದ್ದೆಲ್ಲ Extra. ಎಲ್ಲಾ accessories ಸೇಲ್ ನಲ್ಲಿದೆ ಬೇಕಿದ್ರೆ ಬುಕ್ ಮಾಡಿ ಇಲ್ಲಾಂದ್ರೆ ಹಾಗೇ ತೊಗೊಂಡ್ ಹೋಗಿ...

ಮುಂದಿನ ಪುಟ ನೋಡಿ

“ನಾಟಕ?”

“ಮಂತ್ರಿಗಳ ಮುಂದೆ ಅದಾವ ನಾಟಕಕಾರರಿದ್ದಾರಯ್ಯಾ? ಲೈಟು, ಪರದೆ, ಮೈಕು, ಸೈಡ್‌ವಿಂಗ್ಸ್, ವೇದಿಕೆ ಏನೂ ಇಲ್ಲದೆ ನಾಟಕ ಆಡುವುದರಲ್ಲಿ ಅವರೇ ಅಗ್ರಗಣ್ಯರು. ಅವರ ಮುಂದೆ ನಮ್ಮ ಕಾಲದ ನಟರು ತೀರಾ ಸಪ್ಪೆ.”

“ಭ್ರಷ್ಟಾಚಾರ ವಿರೋಧ ಚಳುವಳಿಯ ಬಗ್ಗೆ ಏನು ಹೇಳುವಿರಿ?”

“ಶುದ್ಧ ತಪ್ಪು; ರಾಜಕಾರಣ ಇಂದಿನ ದಿನಗಳಲ್ಲಿ ಒಂದು ವ್ಯಾಪಾರ. ಬಂಡವಾಳ ಹೂಡಿದವರಿಗೆ ಲಾಭ ಗಳಿಸುವ ಅಧಿಕಾರ ಇರಲೇಬೇಕು!”

“ಹಾಗಾದರೆ ಲಂಚ ನಿರ್ಮೂಲನೆ?”

“ನಿನ್ನ ಲಂಚದ ಹಣವನ್ನು ನಾನು ಮುಟ್ಟುವುದಿಲ್ಲ ಎಂದು ಹೆಂಡತಿ ಹೇಳಲಿ. ಪ್ರತಿ ಮನೆಯಲ್ಲೂ ಹೀಗೆ ಆದರೆ ಲಂಚ ನಿರ್ಮೂಲನೆ ತಾನಾಗೇ ಆಗುತ್ತದೆ”

“ಹಾಗೆ ಆಗುವುದು ಸಾಧ್ಯವೆ?”

“ಹೆಣ್ಣಿಗೆ ಚಿನ್ನದ ಆಸೆ ಇರುವವರೆಗೆ ಅಸಂಭವ”

“ಗುರುಗಳೇ, ನೀವು ಮತ್ತೆ ಹುಟ್ಟುವುದಾದರೆ ಎಲ್ಲಿ ಹುಟ್ಟಬಯಸುವಿರಿ?”

“ಅಮ್ಮನ ಗರ್ಭದಲ್ಲೇ... ಏಕೆ? ಈಗ ಬೇರೆಲ್ಲೋ ಹುಟ್ಟುವಂತಹ ವೈಜ್ಞಾನಿಕ ಬೆಳವಣಿಗೆ ಆಗಿದೆಯೇನು?”

“ಬೀಚಿಯವರೇ, ಈಗಿನ ಜನಗಳನ್ನು ಆಕರ್ಷಿಸುವ ಸಲುವಾಗಿ ಅಶ್ಲೀಲ ಸಾಹಿತ್ಯ ಬರೆಯಬೇಕೆಂದಿದ್ದೇನೆ. ಏನು ಹೇಳುವಿರಿ?”

ಬೀಚಿಯ ವದನದಲ್ಲಿ ಅಸಹನೆ ಮೂಡಿತು. ಹುಕ್ಕಾ ಅತ್ತ ಇಟ್ಟು, ಒಂದೇ ಹಾರಿನಲ್ಲಿ ನನ್ನತ್ತ ಜಿಗಿದು ನನ್ನ ಕೊರಳನ್ನು ತಮ್ಮ ಕೈಗಳಲ್ಲಿ ಬಳಸಿ ಹಿಡಿದು

“ಇನ್ನೊಮ್ಮೆ ಹೇಳು ನೋಡೋಣ” ಎಂದರು. ಧ್ವನಿ ಗಡುಸಾಗಿತ್ತು.

ಅವರ ಕೈಯಿಂದ ತಪ್ಪಿಸಿಕೊಳ್ಳಲು ಕೊರಳನ್ನು ಅತ್ತಿತ್ತ ಅಲ್ಲಾಡಿಸುತ್ತಾ ಹೊರಳಿದೆ.

ಹೊರಳಿದ ರಭಸಕ್ಕೆ ಈಸಿಛೇರ್ನಿಂದ ಕೆಳಕ್ಕೆ ಬಿದ್ದೆ.

ಕನಸು ಹಾರಿತ್ತು.

ಆದರೆ...

ಈಸಿಛೇರ್ನ ಪಕ್ಕದಲ್ಲಿ ಇರುವ ಈ ಪೈಪ್.....? ▪ (ಕೃಪೆ: ಸುಧಾ ವಾರ ಪತ್ರಿಕೆ)

ಕ ನ್ನ ಡ

ಕರ್ನಾಟಕದ ವಾಸ್ತು ಶಿಲ್ಪಗಳು

ಲೇಖಕರು: ಹರೀಶ್ . ಜಿ

ತನು ಕನ್ನಡ ಮನ ಕನ್ನಡ

- ಐಹೊಳೆ ಪಟ್ಟದಕಲ್ಲುಗಳು 'ಭಾರತೀಯ ವಾಸ್ತುಶಿಲ್ಪದ ಕಾರ್ಯಾಗಾರಗಳು' ಎಂದು ಪ್ರಸಿದ್ಧವಾಗಿವೆ
- ಕನ್ನಡಿಗರ ಉದಾತ್ತತೆ ತ್ಯಾಗ ಔನ್ನತ್ಯ ಸ್ವಾಭಿಮಾನಗಳ ಪ್ರತೀಕ ಶ್ರವಣಬೆಳಗೊಳದ ಗೊಮ್ಮಟ ಜಗತ್ತಿನ ಅತಿ ಎತ್ತರದ ಏಕಶಿಲಾ ವಿಗ್ರಹ. ಅದರ ತಂತ್ರಜ್ಞಾನ ಇಂದಿಗೂ ನಿಗೂಢ.
- ಬೇಲೂರು ಹಳೇಬೀಡುಗಳು ಕಲ್ಲಿನಲ್ಲಿ ಮನುಷ್ಯ ಮಾಡಿರಬಹುದಾದ ಅತ್ಯುನ್ನತ ಕುಸುರಿ ಕೆಲಸದ ಉದಾಹರಣೆಗಳು. ಇದಕ್ಕಿಂತ ಸೂಕ್ಷ್ಮ ಶಿಲ್ಪಕಲಾಚಾತುರ್ಯ ಪ್ರಪಂಚದ ಬೇರೆಲ್ಲೂ ಕಾಣಸಿಗದು
- ಹಾಳಾದ ಹಂಪೆ ಹಾಳಾಗದೆ ಇದ್ದಿದ್ದರೆ ಖಂಡಿತಾ ಅದು ವಿಶ್ವದ ಅದ್ಭುತಗಳಲ್ಲಿ ಒಂದಾಗುತ್ತಿತ್ತು

ಕಥಾ ಚಿಲುಮೆ

ಕರುಳ ಮಿಡಿತ

ಲೇಖಕರು: ಕನಕಾಪುರ ನಾರಾಯಣ

ಮಧ್ಯಾಹ್ನದ ಸುಡು ಬಿಸಿಲಿನಲ್ಲಿ ರೈತನೊಬ್ಬ ತನ್ನ ಮನೆಯ ಮುಂದಿನ ಅಂಗಳದಲ್ಲಿ ಸೌದೆಯನ್ನು ಸೀಳುವ ಕೆಲಸದಲ್ಲಿ ತೊಡಗಿದ್ದ.ಕೊಡಲಿಯ ಏಟು ಮರದ ದಿಮ್ಮಿಗೆ ಪ್ರತಿಬಾರಿ ಬೀಳುವಾಗಲೂ ಅವನ ಮೈಯಲ್ಲಿ ಬೆವರು ತೊಟ್ಟಿಕ್ಕುತ್ತಿತ್ತು,ದಣಿದು ಬಾಯಾರಿದ್ದರೂ ಲೆಕ್ಕಿಸದೆ ಒಂದೇ ಸಮನೆ ದುಡಿಯುತ್ತಿದ್ದ ಮಗನನ್ನು ಕಂಡು ಅವನ ತಾಯಿ" ಮಗ ಶಾಖ ಜಾಸ್ತಿ ಅಗ್ತಿದೆ ಮನೆ ಒಳಕ್ಕೆ ಬಾ,ಆಮೇಲೆ ಸೌದೆ ಹೊಡೆದರೆ ಆಯ್ತು" ಅಂದಳು.ಆದರೆ ಅದನ್ನು ಲೆಕ್ಕಿಸದೆ ಸುಡು ಸುಡು ಬಿಸಲಿನಲ್ಲಿ ತನ್ನ ಕೆಲಸ ಮುಂದುವರೆಸಿದ ಮಗ ಪದೇ ಪದೇ ತಾಯಿಯ ಕೂಗನ್ನು ಕೇಳಿ ತಾಳ್ಮೆ ಕಳೆದು ಒಮ್ಮೆ ರೇಗಿದ"ಏ ನೀನು ಒಳಕ್ಕೆ ಹೋಗಮ್ಮಾ,ಹೋಗಿ, ಬೇರೆ ಕೆಲಸ ನೋಡು"ಎಂದು ಬೈದ.

ಒಳಕ್ಕೆಹೋದ ತಾಯಿ ವರುಷವೂ ತುಂಬದ ತನ್ನ ಮೊಮ್ಮಗನನ್ನು ಎತ್ತು ತಂದು ಸುಡುಬಿಸಿಲಿನಲ್ಲಿ ಮಲಗಿಸಿದಳು.ಇದನ್ನು ಕಂಡು ಮಗನಿಗೆ ಬಹಳ ಕೋಪ ಬಂದಿತು"ನಿಂಗೇನ್ ಬುದ್ಧಿಗಿದ್ದಿ ಇದ್ದೀಯಾ? ಅಲ್ಲಾ ಮಗೂನ ಬಿಸಿಲಿನಲ್ಲಿ ಮಲಗಿಸಿದ್ದೀಯಲ್ಲಾ ಮೈ ಸುಡಲ್ವಾ?" ಎಂದು ಗದರಿದ.ಅದಕ್ಕೆ ತಾಯಿ "ಸುಟ್ಟರೆ ನಿಂಗೇನಾಗುತ್ತೆ?" ಎಂದು ಪ್ರಶ್ನಿಸಿದಳು.ಅದಕ್ಕೆ ಆ ರೈತ "ಅದು ನನ್ನ ಮಗು, ಕರಳು ಚುಳ್ ಅನ್ನಲ್ವಾ" ಎಂದ.ತಕ್ಷಣ ತಾಯಿ "ನೀನು ಬಿಸಿಲಿನಲ್ಲಿ ಸುಡ್ತಾ ಇದ್ದರೆ ನನ್ನ ಕರಳು ಏನು ಆಗಬೇಕು?" ಎಂದಳು.ಕೂಡಲೇ ತಾಯಿಯ ಮಮತೆ ಅರಿತು ಮನೆಯೊಳಕ್ಕೆ ಹೊರಟ ಮಗ.▪

ಹಾಲುಬಾಯಿ

ಬೇಕಾಗುವ ಸಾಮಗ್ರಿಗಳು

- ಅರ್ಧ ಕಿಲೋ ಅಕ್ಕಿ
- ಒಂದು ತೆಂಗಿನ ಕಾಯಿ ಅಥವಾ ಗಟ್ಟಿಯಾದ ಕೋಕನಟ್ ಕ್ರೀಮ್
- ಒಂದು ಕಿಲೋ ಬೆಲ್ಲ
- ಚಿಟಿಕೆ ಉಪ್ಪು
- ಯಾಲಕ್ಕಿ 6

ಮಾಡುವ ವಿಧಾನ

- ತೆಂಗಿನ ಕಾಯನ್ನು ಸಣ್ಣಗೆ ತುರಿದು, ಅದನ್ನು ರುಬ್ಬಿ, ಹಾಲನ್ನು ಮಾತ್ರ ತೆಗೆದಿಟ್ಟುಕೊಳ್ಳಿ.
- 1 1/2 ಗಂಟೆಯ ಕಾಲ ನೆನೆಸಿದ ಅಕ್ಕಿ,ತೆಂಗಿನ ಹಾಲು,ಉಪ್ಪು,ಬೆಲ್ಲ ಯಾಲಕ್ಕಿ ಎಲ್ಲವನ್ನೂ ರುಬ್ಬಿಕೊಳ್ಳುವುದು
- ಇದನ್ನು ದಪ್ಪ ತಳದ ಪಾತ್ರೆಯಲ್ಲಿ ಒಲೆಯ ಮೇಲಿಟ್ಟು ಹದವಾಗಿ ಕೈ ಆಡಿಸುತ್ತಾ ಹಲ್ವದಂತೆ ಮಾಡಿಕೊಳ್ಳಿ
- ತುಪ್ಪ ಸವರಿದ ತಟ್ಟೆಯಲ್ಲಿ ಸುರಿದು ಗೋಡಂಬಿ ದ್ರಾಕ್ಷಿ ಉದುರಿಸಿ, ಬೆಚ್ಚಗಿರುವಾಗಲೇ ಚಾಕುವಿನಿಂದ ಚೌಕವಾಗಿ ಕತ್ತರಿಸಿಡಿ.
- ಪೂರ್ತಿ ಆರಿದ ನಂತರ ತಟ್ಟೆಯಲ್ಲಿ ಜೋಡಿಸಿ ಇಟ್ಟು ಸವಿಯಿರಿ

ಇನ್ನೂ ನೂರಾರು ರೆಸಿಪ್ಪಿಗಳಿಗೆ **www.sugamakannada.com** ಗೆ ಭೇಟಿಕೊಡಿ.

ರೆಸಿಪಿ ಕೊಡ್ತೀರಾ!

ಇದೇನ್ಲಾ ಇದು

೧. ಅಕಾಶದಾಗೆ ಅಪ್ಪಣ್ಣ, ಕೆಳಗೆ ಬಿದ್ದರೆ ಧುಪ್ಪಣ್ಣ, ಹುಲ್ಲಿನಲ್ಲಿ ಅಡಗಣ್ಣ, ಮಾರುಕಟ್ಟೇಲಿ ಮಾರಣ್ಣ

೨. ಉದ್ದನೆ ಮೀಸೆ ಮಾಯಣ್ಣ, ಕದ್ದು ಹಾಲು ಕುಡಿಯಣ್ಣ, ಕಂಡ ಕೂಡ್ಲೆ ಓಡಣ್ಣ

ಉತ್ತರಕ್ಕೆ ಪುಟ ೧೧ ನೋಡಿ

ನೀವೂ ಜಾಹೀರಾತು ನೀಡಲು ಬಯಸುವಿರಾದರೆ ನಮಗೆ ಇ-ಮೇಲ್ ಮಾಡಿ: **horanadachilume@gmail.com**

SRI KRISHNA TRAVEL
Travel with a Smile
Contact Mr Sudheendra Rao EMAIL
Mobile 0415 291 723

choice HOME LOANS
Contact Mr.Sathya Bhat EMAIL
Mobile 0412 918 511

Umesh Nagasandra FT
ABN 55 405 83 51 32
Umesh Nagasandra
Mob: 0401 034 456
Email: umesh61@gmail.com
Web: www.arman.com.au
P.O. Box # 4127, Tranmere North, South Australia-5073, Australia.
Contact Mr Umesh EMAIL
Mobile 0401 034 456

AUSTINDIA SANGAM TRANSPORT
Contact Mr Eranna Gotyal EMAIL
Mobile 0404 215 605

ನಿರೀಕ್ಷೆ ...

ಈ ಸುಂದರ ಇರುಳಿನಲಿ
ನಿನ್ನನು ಹೇಗೆ ಮರೆತಿರಲಿ
ತುಂಬು ಚಂದಿರ ಅಂಬರದಲ್ಲಿ
ತುಂಬಿದೆ ತಿಳಿ ನೀರ್ ಕೊಳದಲ್ಲಿ

ಹಸಿರಾಡಿದೆ ತರುಲತೆಗಳಲಿ
ಹೋಸದೆಮ್ಬಂತಿದೆ ಎಲ್ಲವು ಇಲ್ಲಿ
ಈ ಸುಂದರ ಇರುಳಿನಲಿ
ನಿನ್ನನು ಹೇಗೆ ಮರೆತಿರಲಿ

ಎದೆಯಲಿ ಹೊಮ್ಮುವ ಆಸೆಗಳೆಲ್ಲ
ಎದುರಲಿ ಬಂದು ಅಣಕಿಸಿತಲ್ಲ
ಬಂದೇಬರುವೆ ನೀನೆಂಬುವ ನಂಬುಗೆ
ಇಂದಿಗು ನನ್ನಲಿ ಉಳಿದಿಹುದಲ್ಲ
ಈ ಸುಂದರ ಇರುಳಿನಲಿ
ನಿನ್ನನು ಹೇಗೆ ಮರೆತಿರಲಿ

ರಚನೆ: ಮಾಲು (ಅಡಿಲೈಡ್)

ದಿವ್ಯತೆಯ ಅನುಭಾವ ...

ದಿವ್ಯತೆಗೂ ಕಾತುರತೆಗೂ ಏನೋ ಸಂಬಂಧ
ಆ ದಿವ್ಯತೆಯನು ಅರಿಯುವ ಹಂಬಲವಿತ್ತೆನಗೆ

ಹೂವು ಅರಳುವುದು ಸಹಜವೆನಿಸಿದರೂ
ಯಾರು ಅರಳಿಸುವರು ಎಂಬ ಸೋಜಿಗವಿತ್ತೆನಗೆ
ಮೋಡಗಳು ಮಳೆ ಸುರಿಸುವುದಾದರೂ
ಮಳೆಗಾಲದಲ್ಲಿ ಮಾತ್ರವೇಕೆ ಎಂಬ ಪ್ರಶ್ನೆ ಇತ್ತು ಮನಕೆ

ಕಾಳು ಭುವಿಗೆ ಬಿದ್ದು
ಗಿಡವಾಗುವುದು ವಿಜ್ಞಾನವಾದರೂ
ಅಘಾದ ಚೈತನ್ಯ ಬೀಜದೊಳಗೆ
ಬಚ್ಚಿಟ್ಟಿದ್ದು ಯಾರು, ತಿಳಿಸುವವರಿರಲಿಲ್ಲ ನನಗೆ

ಹಲವಾರು ಪ್ರಶ್ನೆಗಳು ಎಚ್ಚರದ ಸ್ಥಿತಿಯಲ್ಲಿ
ಮತ್ತಷ್ಟು ಕನವರಿಕೆಗಳು ರಾತ್ರಿಯ ಕನಸಲ್ಲಿ
ಸಂದೇಹ, ಅತೃಪ್ತಿ ದಿನನಿತ್ಯ ಮನದಲ್ಲಿ
ಸಾಗಿತ್ತು ತಣಿಸಲಾರದ ಮನ ಜಂಜಾಟದಲಿ

ತಾಯಿ ಗರ್ಭದಿ ಮೊಳಕೆಯೊಡೆದು
ನಿಲ್ಲಿಸಿ ನನ್ನ ಕಾತುರತೆಯಲಿ
ಜಗಕೆ ಬಂದ ಆ ಪುಟ್ಟ ಕಂದಮ್ಮ
ದಿವ್ಯ ದೈವತ್ವವನು ಸಾರಿತ್ತು ತನ್ನಾಲಿಂಗನದಲಿ

ರಚನೆ: ಬದರಿ ತ್ಯಾಮಗೊಂಡ್ಲು

ಹಾಸ್ಯ ಚಿಲುಮೆ

ಆ ಭಗವಂತನು ಮೋಸ ಮಾಡುವ ಹೆಂಗಸರನ್ನು ಸೃಷ್ಟಿಸಿಯೇ ಇಲ್ಲ , ಆದರೆ ಬರೀ ಮೋಸಹೋಗುವ ಗಂಡಸರನ್ನು ಮಾತ್ರ ಸೃಷ್ಟಿಸಿದ್ದಾನೆ !

~ ~ ~

20ಕ್ಕೆ ಸುಂದರನಾಗಿಯೂ, 30ಕ್ಕೆ ಧೃಡಕಾಯನಾಗಿಯೂ ,40ಕ್ಕೆ ಧನಿಕನಾಗಿಯೂ 50ಕ್ಕೆ ಜ್ಞಾನಿಯಯಾಗದವನು ಮುಂದೇನಾದರೂ ಸುಂದರ,ಧೃಡಕಾಯ, ಧನಿಕ ಅಥವಾ ಜ್ಞಾನಿಯಾದರೆ ಅದು ಅವನ ಜಾಣತನದಿಂದಲ್ಲ ಇತರರ ದಡ್ಡತನದಿಂದ

ಡಿಸೆಂಬರ್ ೭ - ಹಾಸ್ಯ ಸಾಹಿತಿ ಬೀಚಿ ಈ ಲೋಕ ಬಿಟ್ಟ ದಿನ
ಅವರ ಹಾಸ್ಯದ ಕೆಲವು ತುಣುಕುಗಳು ಈ ಸಂಚಿಕೆಯಲ್ಲಿ

ತಿಮ್ಮಡಾಕ್ಟರ್ ಬಳಿಗೆ ಓಡೋಡಿ ಬಂದ

" ಡಾಕ್ಟರೇ ನಾನು ಪತ್ರ ಬರೆಯೋವಾಗ ನನ್ನ ಮಗ .... ನನ್ನ ಮಗ.....ಇಂಕ್ ಬಾಟಲ್ ಇಟ್ಟಿದ್ರೆ ಎತ್ಕೊಂಡ್ ಗಟ ಗಟ ಅಂತ ಕುಡುದ್ಬುಟ್ಟಾ ಡಾಕ್ಟ್ರೇ,,ಏನ್ ಮಾಡ್ಲೀ ಡಾಕ್ಟ್ರೇ ಬೇಗ ಬನ್ನೀ ಡಾಕ್ಟ್ರೇ "ಎಂದು ಗೋಗರೆದ.

ಆ ಡಾಕ್ಟರೋ ಬಹಳ ಬಿಜಿ,

"ನೋಡಪ್ಪಾ ತಿಮ್ಮ ಇಲ್ಲಿ ತುಂಬಾ ಜನ ಇದ್ದಾರೇ ನಾನು ಇನ್ನು ಹತ್ತು-ಹದಿನೈದು ನಿಮಿಷದಲ್ಲಿ ಅಲ್ಲಿರ್ತೀನಿ, ಅಲ್ಲೀವರೆಗೂ ನೀನು,,,,,, "

ತಿಮ್ಮ ತಕ್ಷಣ ಹೇಳಿದ "ಅಲ್ಲೀವರೆಗೂ ಏನ್ ಮಾಡೋದ್ ಡಾಕ್ಟ್ರೇ, ಪೆನ್ಸಿಲ್ ನಲ್ಲೇ ಬರೀತಿರ್ತೀನಿ"

ಜಾಣ ಕರ್ನಾಟಕ

೧. ಕನ್ನಡ (ಕರ್ನಾಟಕ) ಸಾಹಿತ್ಯ ಪರಿಷತ್ ಸ್ಥಾಪಿಸಿದವರು ಯಾರು, ಯಾವ ವರ್ಷದಲ್ಲಿ? ಮೊದಲ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷರು ಯಾರು?

೨. 2014 ರ ಕನ್ನಡ ಸಾಹಿತ್ಯ ಸಮ್ಮೇಳನ ಪರಿಷತ್ತು ನಡೆಸುತ್ತಿರುವ ಎಷ್ಟನೆಯ ಸಾಹಿತ್ಯ ಸಮ್ಮೇಳನ, ಇದು ಎಲ್ಲಿ ನಡೆಯಲಿದೆ.

ಸರಿ ಉತ್ತರಕ್ಕೆ ಪುಟ ೧೬ ನೋಡಿ

ಮತ್ತಷ್ಟು ಹಾಸ್ಯಕ್ಕೆ ಭೇಟಿ ಕೊಡಿ – ಸುಗಮ ಕನ್ನಡ ಕೂಟ

ಇದೇನ್ಲಾ ಇದು – ಉತ್ತರ

೧. ಮಾವು

೨. ಬೆಕ್ಕು

ಸಂತ ಮತ್ತು ಸಾಂಟಾ

ಲೇಖಕರು: ಸ್ಮಿತಾ ಮೇಲ್ಕೋಟೆ

ಸಾಂಟಾನಿಗೆ ನಿದ್ದೆ ಹತ್ತಲಿಲ್ಲ ಯಾಕೋ , ಡಿಸೆಂಬರ್ ೨೫ ಹತ್ತಿರ ಬರುತ್ತಾ ಇದೆ, ಇನ್ನೂ ಮಕ್ಕಳಿಗೆ ಏನೂ ಕೊಂಡಿಲ್ಲ. ಪ್ಯಾಕ್ ಮಾಡಿಲ್ಲ, ಆಟಿಕೆಗೆ ಬೇಕಾದ ರಾಶಿ ರಾಶಿ ಬ್ಯಾಟರಿ ಬೇರೆ ಆರ್ಡರ್ ಮಾಡಬೇಕು. ಏನಪ್ಪಾ ಮಾಡುವುದು ಎಂದು ಯೋಚನೆ ಮಾಡಿಕೊಂಡು ಮಲಗಿದ್ದಾಗ ಒಬ್ಬ ಸಂತ ಕನಸಿನಲ್ಲಿ ಬಂದು, ನೀನು ಭಾರತ ದೇಶಕ್ಕೆ ಹೋಗು ಶಾಪಿಂಗ್ ಮಾಡುವುದಕ್ಕೆ, ಅಲ್ಲಿ ನಿನ್ನ ಮನಸ್ಸಿಗೆ ಇಷ್ಟವಾಗುವ ಎಲ್ಲಾ ಆಟಿಕೆಗಳು ಸಿಗುತ್ತವೆ ಎಂದು ಹೇಳಿ ಅದೃಶ್ಯನಾದ .

ಸಂತ ಕಾವಿ ವಸ್ತ್ರ ಧರಿಸಿದ್ದ. ಸಾಂಟಾಗೆ ಅವನು ಯಾರಿರಬಹುದು ಎಂಬ ಕುತೂಹಲ. ಸರಿ, ರಾತ್ರಿಯೇ ಹೊರಟು ಭಾರತ ತಲುಪಿದ, ಅಲ್ಲಿಯ ಶೆಖೆಗೆ ಪಾಪ ತನ್ನ ಗಡ್ಡ ತಲೆ ಎಲ್ಲ ಸಿಕ್ಕಾಪಟ್ಟೆ ಬೆವರು ಸುರಿಸಿತು. ಒಹ್ ಗಾಡ್! ಏನು ಇಷ್ಟು ಹಾಟ್ ಇಲ್ಲಿ, ನನಗೆ ಕೋಕು ಪೆಪ್ಸಿ ಕರುಣಿಸು ಅಂದಾಗ, ಎಳೆನೀರ್ ಎಳ್ ನೀರ್ ಅಂತ ಮನುಷ್ಯ ಸೈಕಲ್ ಮೇಲೆ ಕೊಗಿಕೊಂಡು, ಹಸಿರು ಚಿಕ್ಕ ಚಿಕ್ಕ ಕಂಟೇನರ್ ನಲ್ಲಿ ವಾಟರ್ ಕೊಡುವುದ ನೋಡಿ, ವಾಟ್ ಇಸ್ ದಿಸ್ ಎಂದ, ಎಳ್ನೀರಿನವನು, ಸಾಂಟಾನ ವಿಚಿತ್ರವಾಗಿ ನೋಡಿ, ವಾಟರ್ ವಾಟರ್, ಸ್ವೀಟ್ ವಾಟರ್, ವಾಂಟ್‌ಆ? ಸಾಂಟಾ, "ವಾಂಟ್" ಎಂದು ಬೇಗ ಕುಡಿದು, ತನ್ನ ನೀರಡಿಕೆ ದೂರಾದ ಮೇಲೆ, ಆಹಾ ಕೋಕು ಪೆಪ್ಸಿ ಬಿಟ್ಟು ಇಷ್ಟು ಸವಿಯಾದ ನೀರು ಭೂಮಿಯಲ್ಲಿ ಇದೆಯೇ? ಏನೀ ಆಶ್ಚರ್ಯ !!!

ಹಾಗೆ ಮುಂದೆ ಹೋದಾಗ ದೊಡ್ಡ ದೊಡ್ಡ ಅಂಗಡಿ ಮಳಿಗೆಗಳು ಕಂಡವು. ಬೇಕಾದಷ್ಟು ಆಟಿಕೆಗಳು. ರೈಲು, ಬಸ್ಸು, ಆಟೋ , ಟ್ರಕ್ ಈತರದ ಬೇಕಾದಷ್ಟು ಸಾಮಾನುಗಳು ಇದ್ದವು, ಆನೆ, ಕುದುರೆ, ಸಿಂಹ, ಹುಲಿ, ಹಾವು, ಚೇಳು, ಎಲ್ಲಾ ಮೆತ್ತನೆಯ ಹತ್ತಿಯಲ್ಲಿ ಮಾಡಲ್ಪಟ್ಟಿದ್ದವು. ಆಟಿಕೆಗಳ ಬಾಕ್ಸ್ ನೋಡಿದ, ಮೇಡ್ ಇನ್ ಚೈನಾ! ಅರೆ ನಮ್ಮ ದೇಶದ ಹಾಗೇ ಇವೆ ಏನೂ ವ್ಯತ್ಯಾಸ ಇಲ್ಲ, ಯಾಕೆ ನನ್ನ ಕನಸಿನಲ್ಲಿ ಬಂದ ಕಾವಿಧಾರಿ ಒಳ್ಳೆ ಪದಾರ್ಥ ಭಾರತದಲ್ಲಿ ಸಿಗುತ್ತೆ ಅಂದ, ಇಲ್ಲಿ ನೋಡಿದರೆ ಅಂಥಾ ವಿಶೇಷ ಏನೂ ಕಾಣುತ್ತಾ ಇಲ್ಲವೇ. ಹೀಗೆ ಅಂದು ಕೊಳ್ಳುತ್ತಿರುವಾಗಲೇ ಸಾಂಟಾ ಮುಂದೆ ಸಂತ ಬಂದು ಹಸನ್ಮುಖಿಯಾಗಿ ನಿಂತ.

ಸಾಂಟಾ ಒಂದು ಕ್ಷಣ ತಬ್ಬಿಬ್ಬು. ಕನಸಿನಲ್ಲಿ ನೋಡಿದ ಮನುಷ್ಯ ಇವನೇ ಏನು? ಅನ್ನುವಷ್ಟರಲ್ಲೇ, ಸಂತ "ನಿಮ್ಮ ಮನಸ್ಸಿನಲ್ಲಿ ಬಂದ ವಿಷಯ ಸತ್ಯ . ನಾನೇ ಅವನು. ನಿಮಗೆ ಬೇಕಾದ ಸಾಮಾನುಗಳು ಒಂದು ಕಡೆ ಸಿಗುತ್ತೆ ಬನ್ನಿ ನನ್ನ ಜೊತೆ" ಎಂದು ಚನ್ನಪಟ್ಟಣದ ಸಂತೆಗೆ ಕರೆದೊಯ್ದ .

ಅಲ್ಲಿ ಬಣ್ಣ ಬಣ್ಣದ ಆಟಿಕೆಗಳು. ಒಂದಕ್ಕಿಂತ ಒಂದು ಸುಂದರವಾದ ಆಕೃತಿಗಳನ್ನು ನೋಡಿದಂತಿತ್ತು. ಸಾಂಟಾ ಖುಷಿಯಿಂದ ಏನಿದು ಸ್ವಾಮೀ ಬಣ್ಣದ ಆಟಿಕೆಗಳ ಲೋಕ, ಚಲಿಸುವ ಕಾರು, ರೈಲು, ಬಸ್ಸು ಮರದಲ್ಲಿ ಮಾಡಿದ ಕುದುರೆ, ತಲೆ ಆಡಿಸುವ ಕೋತಿ, ಕತ್ತು ಕೊಂಕಿಸುವ ಯುವತಿ, ಸುಂದರವಾದ ಬಾರ್ಬಿಗೆ ಕಾಂಪಿಟಿಷನ್ನು ಕೊಡುವ ಮರದ ಯುವತಿಯರು ಸಾಂಟಾನನ್ನು ವಿಸ್ಮಯ ಗೊಳಿಸಿದರು. ಸಂತನು ಸಾಂಟಾನಿಗೆ ಹೇಳಿದನು, "ಈ ಎಲ್ಲಾ ಆಟಿಕೆಗಳು ಇಲ್ಲೇ ತಯಾರಾಗಿವೆ. ಯಾವುದಕ್ಕೂ ಕೂಡ ಬ್ಯಾಟರಿ ಬೇಡ, ಮೂರು ಕಾಲಿನ ಮರದ ಸೈಕಲ್, ಮಕ್ಕಳಿಗೆ ಯಾವ ನೆಲದಲ್ಲಿ ಬೇಕಾದರೂ ಚಲಿಸುತ್ತವೆ. ನಿಮ್ಮ ದೇಶದ ವಾಕರ್ ತರವೇ".

ಸಾಂಟಾ ರಾಶಿ ರಾಶಿ ಆಟಿಕೆಗಳನ್ನು ಕೊಂಡ, ಅಲ್ಲಿಯೇ ಪ್ಯಾಕ್ ಕೂಡ ಮಾಡಿಸಿದ. ನಂತರ ಯೋಚಿಸಿದ, ಅಯ್ಯೋ ಇಷ್ಟು ದೂರ ಬಂದಿದ್ದೇನೆ, ಈ ದೇಶದ ಮಕ್ಕಳಿಗೂ ಕೂಡ ಏನನ್ನಾರು ಕೊಟ್ಟು ಹೋಗಬೇಕು ಎಂದು. ಆದರೆ ಇಲ್ಲಿರುವ ಮಕ್ಕಳಿಗೆ ಏನು ಹಿಡಿಸಬಹುದು? ಒಂದು ಸುತ್ತುಹಾಕಿ ಬರೋಣ ಆಮೇಲೆ ಕೊಂಡರಾಯಿತು ಎಂದು ಹೊರಟ.

ಮುಂದೆ ಒಂದು ಚಿಕ್ಕ ಹುಡುಗರ ಗುಂಪು ಕಬಡ್ಡಿ ಆಟ ಆಡುತ್ತಿದ್ದರು. ಚಿನ್ನಿ ದಾಂಡು, ಲಗೋರಿ ಆಟಗಳನ್ನು ನೋಡಿ ಸಂತನ ಬಳಿಯಲ್ಲಿ ಕೇಳಿದ ಯಾವ ಆಟದ ವಸ್ತುವೂ ಇಲ್ಲದೆ ಆಡುತಿದ್ದಾರಲ್ಲಾ ಏನಿದೂ ವಿಚಿತ್ರ. ಸಂತ ಸುಮ್ಮನೆ ನಸುನಕ್ಕು ಮುಂದೆ ಕರೆದೊಯ್ದ. ಬೀದಿಯಲ್ಲಿ ಕೆಲವು ಹೆಣ್ಣು ಮಕ್ಕಳು ಸೀಮೆಸುಣ್ಣದಿಂದ ಚೌಕಾಕಾರದ ಮನೆಗಳ ಬರೆದು, ಕುಂಟೆ ಬಿಲ್ಲೆ ಆಡುತಿದ್ದರು. ಸಾಂಟಾಗೆ ಮತ್ತೆ ಆಶ್ಚರ್ಯ. ಸಾಂಟಾ ಮುಂದೆ ಹೊರಟ. ಕೆಲವು ಮಕ್ಕಳು ಮನೆಯ ಹೊರಬಾಗದಲ್ಲಿ ಕುಳಿತು ಚೌಕಾಬಾರಾ ಆಡುತಿದ್ದರು. ಸಾಂಟಾ ಚೌಕದಲ್ಲಿ ಇದ್ದ ಹುಣಸೆ ಬೀಜವನ್ನು ಕುತೂಹಲದಿಂದ ನೋಡಿದ, ಸಂತ "ಅದು ಸೀಡ್ಸ್, ಮಕ್ಕಳಿಗೆ ಅಡಿಗೆಮನೆಯಲ್ಲಿ ಅಮ್ಮ ಕೊಟ್ಟಿದ್ದು" ಎಂದ , ಸಾಂಟಾ "ಸೀಡ್ಸ್‌ಳು ಒಂದು ಆಟದ ವಸ್ತುವೇ ? ಅಬ್ಬಾ!!!" ಎಂದ. ಮನೆಯ ಹೊರಗೆ ಕೂತು ಸೂರ್ಯನ ಕಿರಣಗಳನ್ನು ಅಸ್ವಾದಿಸುತ್ತಾ ಇನ್ನು ಕೆಲವು ಮಕ್ಕಳು ಅಳುಗುಳಿಮನೆ ಆಡುತಿದ್ದರು , ಸಾಂಟಾನಿಗೆ ಈ ಆಟ ನೋಡಿ ಏನಿದು ಎಷ್ಟು mathematical ಆಗಿದೆ ಈ ಆಟ ಎಂದು ಬಹಳ ಮೆಚ್ಚುಗೆ ವ್ಯಕ್ತ ಪಡಿಸಿದ. ನಮ್ಮ ದೇಶದ ಮಕ್ಕಳೋ ಮೂರು ಹೊತ್ತು ವೀಡಿಯೊ ಗೇಮ್ಸ್ ಕೈಯಲ್ಲಿ ಹಿಡಿದು ಮನೆಯ ಒಳಗಿನ ಸೋಫಾ ಮೇಲೆ ಕೂತ ದೃಶ್ಯ ಕಣ್ಣಿಗೆ ಬಂತು. ಇನ್ನು ಕೆಲವು ಗಂಡು ಮಕ್ಕಳು ಮತ್ತು ಹೆಣ್ಣು ಮಕ್ಕಳು ಹಿಡಿ ಓಡು ಆಟ ಆಡುತ್ತಿದ್ದರು. ಸಾಂಟಾ ನೋಡಿ ಅಬ್ಬ ಮಕ್ಕಳ ಬೆಳವಣಿಗೆ ಇದು ಎಷ್ಟು ಮುಖ್ಯ . ಹೊರಗೆ ಬರುವುದೇ ಅಪರೂಪ ನಮ್ಮ ದೇಶದ ಮಕ್ಕಳು, ಸ್ವತಂತ್ರವಾಗಿ ಬ್ಯಾಟರಿ ರಹಿತ ಆಟಿಕೆಗಳು ಕಂಡೇ ಕಾಣರು. ಒಂದರ ಮೇಲೊಂದು ಹೊಸ ಆಟಿಕೆಗಳನ್ನು ತಂದು ಜೋಡಿಸುವ ಅಪ್ಪ ಅಮ್ಮ. ಏನಾಗಿದೆ ನಮಗೆ, ಹೀಗೆ ನಡೆದರೆ ನಮ್ಮ ಮಕ್ಕಳ ಬೆಳವಣಿಗೆ ಕುಂಟಿತವಾಗುವುದಿಲ್ಲವೇ ??? ಎಂದು ದೊಡ್ಡ ಯೋಚನೆಗೀಡಾದ .

ದೇವರೇ ಭಾರತದಲ್ಲಿ ಇರುವ ಎಲ್ಲಾ ಆಟಗಳು ನಮ್ಮ ದೇಶದ ಮಕ್ಕಳು ಆಡುವ ಹಾಗೆ ಮಾಡಪ್ಪ, ಅವರ ಬೆಳವಣಿಗೆ ಸಹಾಯಕಾರಿ ಮಾಡು ಎಂದು ಬೇಡಿಕೊಂಡು ತನ್ನ ದೇಶಕ್ಕೆ ವಾಪಸ್ ಬಂದ .

ಕೆಲವು ವರ್ಷಗಳ ಬಳಿಕ ಮತ್ತೆ ಸಾಂಟಾಗೆ ಭಾರತಕ್ಕೆ ಹೋಗಿ ಮತ್ತೊಮ್ಮೆ ನೋಡಿ ಬರಬೇಕು ಎಂದು ಅನಿಸಿ ಹೊರಟ. ರಸ್ತೆಯಲ್ಲಿ ಯಾವ ಮಕ್ಕಳೂ ಕಾಣವಲ್ಲರು . ಏನಾಯಿತು ಮಕ್ಕಳ ಸಂಖ್ಯೆ ಇಳಿಮುಖವಾಗಿದೆಯೇ ಎಂದು ಮನಸ್ಸಿನಲ್ಲಿ ಸಂತನ ಕೇಳಿದ. ಧುತ್ತನೆ ಪ್ರತ್ಯಕ್ಷನಾದ ಸಂತ ಸಾಂಟಾನನ್ನು ಒಂದು ಮನೆ ಒಳಗೆ ಕರೆದೊಯ್ದ. ಅಲ್ಲಿದ್ದ ಒಂದೇ ಮಗು ಕಿವಿಗೆ earplugs ಹಾಕಿಕೊಂಡು ಯಾವುದೋ ವೀಡಿಯೊ ಆಟವನ್ನು ಆಡುತ್ತಿತ್ತು. ಅವನ ಆಟಿಕೆಗಳು ಷೋಕೇಸ್ ನಲ್ಲಿ ಒಂದರ ಪಕ್ಕ ಒಂದು ಜೋಡಿಸಲ್ಪಟಿದ್ದವು...

ಸಂತ ಮತ್ತು ಸಾಂಟಾ ಇಬ್ಬರ ಮುಖವೂ ಸಪ್ಪೆಯಾಯಿತು !!! ▪

ಪದ-ಪುಂಜ (ಶಾನೆ ತಲೆ ಕೆಡಿಸ್ಕೋಬೇಡಿ)

ಅ	ತು	ಪ
ಮ	ಚ	ಲೆ
ನು	ರ	ಕ

ಏನ್ ರೂಲ್ಸ್ ?

ಮೇಲಿನ ಒಂಭತ್ತು ಅಕ್ಷರಗಳನ್ನು ಉಪಯೋಗಿಸಿ 2 ರಿಂದ 9 ಅಕ್ಷರಗಳಿರುವ ಪದಗಳನ್ನು ರಚಿಸಿ.

- ಮೂರಕ್ಕಿಂತ ಹೆಚ್ಚಿನ ಅಕ್ಷರ ಇರುವ ಪದಗಳು ಸಂಯುಕ್ತ ಪದಗಳಿರಬಹುದು
- ಮಧ್ಯದ ಅಕ್ಷರ "ಚ" ವನ್ನು ಒಳಗೊಂಡ ಕನಿಷ್ಠ 10 ಪದಗಳು ಇರಲೇಬೇಕು.
- ಒಂದು ಅಕ್ಷರವನ್ನು ಒಂದು ಪದದಲ್ಲಿ ಒಂದೇ ಸಲ ಬಳಸಬೇಕು
- 10 ಸಾಧಾರಣ, 15 ಉತ್ತಮ, 20+ ಅತ್ಯುತ್ತಮ

ನಿಮ್ಮ ಉತ್ತರ ಈಮೈಲ್ ಮಾಡಿ, (horanadachilume@gmail.com)

20 ಕ್ಕೂ ಹೆಚ್ಚು ಪದಗಳನ್ನು ರಚಿಸಿದವರ ಹೆಸರನ್ನು ಮುಂದಿನ ಸಂಚಿಕೆಯಲ್ಲಿ ಪ್ರಕಟಿಸಲಾಗುವುದು.

ಡಿಸೆಂಬರ್ 25 ತಮ್ಮ ಉತ್ತರ ಕಳುಹಿಸಲು ಕಡೆಯ ದಿನಾಂಕ.

ನವೆಂಬರ್ ಪದ ಪುಂಜ – ಉತ್ತರ

ಕಳೆದ ತಿಂಗಳ ಪದ ಪುಂಜಕ್ಕೆ ಉತ್ತರಿಸಿದ ಅನೇಕ ಜನರಿಗೆ ನಮ್ಮ ಧನ್ಯವಾದಗಳು. ಅವರ ಪೈಕಿ ೨೦ಕ್ಕೂ ಹೆಚ್ಚು ಪದಗಳನ್ನ ಕಳುಹಿಸಿರುವ ಇವರಿಗೆ ನಮ್ಮ ಅಭಿನಂದನೆಗಳು.

- ರಾಜೇಶ್ವರಿ ಜಯದೇವ್, ಸಿಡ್ನಿ
- ಸುಮಾ ಅಶೋಕ್, ಸಿಡ್ನಿ
- ನಾಗಶ್ರೀ ಮೂರ್ತಿ, ಪುಣೆ
- ಸ್ಮಿತಾ ಮೇಲ್ಕೋಟೆ, ಸಿಡ್ನಿ

ನವೆಂಬರ್ ತಿಂಗಳ ಪದಪುಂಜ

ಸ	ನ	ರ
ಹ	ಯ	ರಿ
ಗಾ	ಲ	ಮ

ಮೂಡಬಹುದಾದ ಹಲವು ಪದಗಳು:

ರಸ, ರಯ, ರಸನ, ರಸಮಯ, ಸಮ, ಸಮಗಾರ, ಸಮಯ, ಸಮರ, ಸರ, ಸರಲ, ಸರಿ, ಸಲ, ಸಹ, ಸಹನ, ಮನ, ಮಯ, ಮರ, ಮರಿ, ಮಲ, ಮಲಯ, ಮಹ, ಯಮ, ಯಮಲ, ಗಾನ, ಗಾಯನ, ಗಾಲ, ಗಾಸ, ಗಾಹ, ಗಾಯ, ನಗಾರಿ, ನಯ, ನರ, ನರಿ, ನಲ, ಲಯ, ಲಹರಿ, ಹಯ, ಹರ, ಹರಯ, ಹರಿ

ರಸಮಯಗಾನಲಹರಿ

Contact Mr. Nagendra EMAIL
0401193852

ರಂಗೋಲಿ ಬುಕ್

ನಿಮ್ಮ ರಂಗೋಲಿ ಇಲ್ಲಿ ಕಾಣಬೇಕೇ? ಇ-ಮೇಲ್ ಮಾಡಿ: horanadachilume@gmail.com

ಮತ್ತಷ್ಟು ರಂಗುರಂಗಿನ ರಂಗೋಲಿ ಮುಂದಿನ ಸಂಚಿಕೆಯಲ್ಲಿ

ರಂಗವಲ್ಲಿ

ಭಾರತೀಯ ಸಂಸ್ಕೃತಿಯಲ್ಲಿ, ನಿಯಮ ಪ್ರಕಾರ ಮಾಡುವ ಅನೇಕ ಕಾರ್ಯಗಳಲ್ಲಿ ರಂಗೋಲಿ ಬಿಡಿಸುವುದೂ ಒಂದು. ಸಾಮಾನ್ಯವಾಗಿ ಮನೆಯ ಹೆಣ್ಣು ಮಕ್ಕಳು ತಮ್ಮ ದೈನಂದಿನ ಚಟುವಟಿಕೆಯ ಒಂದು ಅಂಗವಾಗಿ ರಂಗೋಲಿ ಹಾಕುವುದನ್ನು ರೂಡಿಸಿಕೊಂಡಿರುತ್ತಾರೆ. ಮನೆಯ ಮುಂದೆ ರಂಗೋಲಿ ಇದ್ದರೆ ಅದೆಷ್ಟು ಲಕ್ಷಣ!



ರಚನೆ: ಶ್ರೀಮತಿ ಪುಷ್ಪ ವೆಂಕಟೇಶ್

ಕೇವಲ ಸಂಸ್ಕೃತಿ ಅಷ್ಟೇ ಅಲ್ಲದೆ, ರಂಗೋಲಿ ಬಿಡಿಸುವುದರಿಂದ, ರೇಖಾ ಗಣಿತ ಉತ್ತಮಪಡಿಸಿಕೊಳ್ಳುವಲ್ಲಿ ಸಹಕಾರಿ. ಅದೆಷ್ಟು ಚುಕ್ಕಿಗಳು, ಎಂತೆಂತಹ ರೇಖೆಗಳು, ತರಹಾವರಿ ನಮೂನೆಗಳು. ಅಬ್ಬ! ರಂಗೋಲಿ ನಿಮಗೆ ಬೆರಗು ಮಾಡಿಲ್ಲವೇ? ಒಮ್ಮೆ ರಂಗೋಲಿಯಲ್ಲಿ ಕೈ ಆಡಿಸಿ ನೋಡಿ, ಒಂದು ಕಾವ್ಯವೇ ಹುಟ್ಟೀತು ... ▪

ನೆನಪಿನ ಪಯಣ - ಸೈಕಲ್ ಯಾತ್ರೆ - ೧

ಲೇಖಕರು: ನಾಗಶೈಲ ಕುಮಾರ್

ನಾಗಶೈಲ ಕುಮಾರ್ ಭಾರತದಲ್ಲಿ ಕೈಗೊಂಡಿದ್ದ "ಸೈಕಲ್ ಪಯಣ" ದ ಅನುಭವ "ನೆನಪಿನ ಪಯಣ" ವಾಗಿ ಈ ಸಂಚಿಕೆಯಿಂದ ...

ಮಾನಸಾದೇವಿಯ ಮಂದಿರದಲ್ಲಿ ...

ಮಾನಸಾ ದೇವಿಯ ಮಂದಿರದ ಹೊರನಿಂತು ನೋಡಿದಾಗ ಕಂಡ ದೃಶ್ಯದಿಂದಾದ ಆನಂದದ ಅನುಭವ ಅನಿರ್ವಚನೀಯ. ನಾವು ನಿಂತಿದ್ದ ಬೆಟ್ಟದಿಂದ ಕೆಳಗೆ ಕಣ್ಣು ಹಾಯಿಸಿದಷ್ಟು ದೂರಕ್ಕೂ, ಬೆಳಗಿನ ಸೂರ್ಯನ ಕಿರಣಗಳನ್ನು ಪ್ರತಿಫಲಿಸಿ ಪಳಪಳ ಹೊಳೆಯುತ್ತಾ, ಜರತಾರಿ ಹಾಸಿದಂತೆ ಹರಿದಿದ್ದಳು ಗಂಗೆ. ಮತ್ತೊಂದೆಡೆ ನೋಡಿದಾಗ ದೂರದಲ್ಲೆಲ್ಲೋ ಕಂಡೂ ಕಾಣಿಸದ ಹಾಗೆ ಬೆಳ್ಳಿ ಕವಚವನ್ನು ಹೊದ್ದು ಮುಗಿಲನ್ನು ಸೀಳಿ ನಿಂತಿದ್ದ ಹಿಮಾಲಯದ ಶಿಖರಗಳು. ಬೆಳಗಿನ ಆ ಹಿತಕರ ವಾತಾವರಣ, ದೇಗುಲದಲ್ಲಿನ ಘಂಟೆ, ನಗಾರಿಗಳ ಜೊತೆ ಮಂತ್ರ ಘೋಷಗಳೂ ಸೇರಿ ಮೈ ರೋಮಾಂಚನಗೊಂಡಿತ್ತು. ಆ ಆನಂದದ ಉನ್ಮಾದದಲ್ಲಿ, ಈ ಪವಿತ್ರ ಸ್ಥಳದ ಯಾತ್ರೆಯನ್ನು ನನ್ನ ತಂದೆತಾಯಿಯರಿಗೆ ಮಾಡಿಸುತ್ತೇನೆಂದು ಮಾನಸಾದೇವಿಯ ಮುಂದೆ ನಿರ್ಧಾರ ಮಾಡಿದೆ. ಇಂದು ನನ್ನ ಸಾಹಸ ಯಾತ್ರೆಯ ಮೇರು ಮುಟ್ಟಿರುವ ದಿನ. ಈ ನನ್ನ ಕಾರ್ಯಕ್ಕೆ ಕಾರಣನಾದ ನನ್ನಣ್ಣ ಗಣೇಶ, ವಿನಾಯಕನೇ ಸರಿ. ನಾಯಕನಾಗಿ ಮುಂದೆ ನಿಂತು ನನ್ನಿಂದ ಈ ಸಾಹಸವನ್ನು ನಡೆಸುತ್ತಿದ್ದಾನೆ.

25 ವರ್ಷಗಳಾಗಿ ಹೋಯಿತು: 1988 ಡಿಸೆಂಬರ್ ತಿಂಗಳ ೨೪ ನೇ ತಾರೀಖು, ಬೆಳಗಿನ ಸೂರ್ಯೋದಯದ ಸಮಯ, ತಂದೆ ತಾಯಿ, ಒಡಹುಟ್ಟಿದವರು, ಭಾವೀ ಅತ್ತಿಗೆ, ಸ್ನೇಹಿತರ ಹಾರೈಕೆ, ಶುಭಾಶಯಗಳನ್ನು ಸ್ವೀಕರಿಸಿ, ನಾನು ನನ್ನಣ್ಣ ಸೈಕಲ್ಲನ್ನೇರಿದ್ದೆವು. ಹಿತಕರವಾದ ಎಳೆ ಬಿಸಿಲನ್ನು ಸವಿಯುತ್ತಾ, ಸೈಕಲ್ ಚಕ್ರವನ್ನು ತಿರುಗಿಸುತ್ತಾ, ನನ್ನ ಮನದ ಗಾಲಿಯೂ ಉರುಳಿತ್ತು, "ಇದು ನನ್ನಿಂದಾಗುವ ಕೆಲಸವೇ?, ಎಂಬ ಪ್ರಶ್ನೆಗೆ, ಮನಸ್ಸೊಂದಿದ್ದರೆ ಏನು ಬೇಕಾದರೂ ಸಾಧಿಸಬಹುದು", ಎಂದು ನನಗೆ ನಾನೇ ಸಮಾಧಾನ ಹೇಳಿಕೊಳ್ಳುತ್ತಾ, ನನ್ನಣ್ಣನನ್ನು ಹಿಂಬಾಲಿಸತೊಡಗಿದೆ. ನಮ್ಮಲ್ಲಿ ಧೈರ್ಯ, ಸಾಹಸ, ಸದ್ಗುಣಗಳನ್ನು ಬಿತ್ತಿ ಬೆಳೆಸಿದ ಅಜ್ಜ, ಅಜ್ಜನ ಊರಾದ ಅರಳುಮಲ್ಲಿಗೆಯನ್ನು ನೆನೆಪಿಸಿಕೊಳ್ಳುತ್ತಾ, ಅಲ್ಲಿಂದಲೇ ಅಜ್ಜನಿಗೆ ನಮಿಸುತ್ತಾ ದೊಡ್ಡಬಳ್ಳಾಪುರದ ಹಾದಿಯಲ್ಲಿ ಮುನ್ನಡೆದೆವು.

ಅನಿರೀಕ್ಷಿತ ಆಸ್ಫೋಟ: ಎರಡನೆಯ ದಿನ ಸಂಜೆ ಪ್ರಶಾಂತವಾದ ವಾತಾವರಣ, ಅನಂತಪುರದಿಂದ ಗೂಟಿ ಎಂಬೆಡೆಗೆ ಪಯಣ. ಸಮತಟ್ಟಾದ ಬಯಲು ಪ್ರದೇಶ, ಮುಂದೆ ನಮ್ಮಣ್ಣ, ನೂರು ಮೀಟರಗಳ ಹಿಂದೆ ನಾನು. ರಸ್ತೆ ಬದಿಯಲ್ಲಿ ಖಾಕಿ ಸಮವಸ್ತ್ರ ಧರಿಸಿ ನಿಂತಿದ್ದ ವ್ಯಕ್ತಿಯೊಬ್ಬ ನಮ್ಮಣ್ಣನಿಗೆ ಏನೋ ಹೇಳಿದ, ನಮ್ಮಣ್ಣ ತಲೆಯಾಡಿಸಿ ಮುಂದೆ ಸಾಗಿದ, ಅವರೀರ್ವರ ಸಂಭಾಷಣೆ ನನಗೆ ಕೇಳಿಸಲಿಲ್ಲ.

ನಂತರ ಕೇವಲ ೧೦ ಕ್ಷಣಗಳಾಗಿರಬಹುದಷ್ಟೇ, ಇದ್ದಕ್ಕಿದ್ದಂತೇ ಬಾಂಬ್ ಹಾಕಿದಂತಹ ಸದ್ದು. ರಸ್ತೆಯಿಂದ ಕೇವಲ ನೂರು ನೂರೈವತ್ತು ಮೀಟರ್ ದೂರದಲ್ಲಿ ಭಾರೀ ಆಸ್ಫೋಟ. ಕೆಂಧೂಳು ಮೇಲೇರಿ, ಕಲ್ಲಿನ ಚೂರುಗಳು ನಮ್ಮನ್ನೂ ಆವರಿಸಿ ಎಲ್ಲೆಡೆ ಸಿಡಿಯುತ್ತಿದೆ, ನಾನು ಗಾಬರಿಯಿಂದ ತಲೆತಗ್ಗಿಸಿ ಜೋರಾಗಿ ಸೈಕಲ್ ತುಳಿಯುತ್ತಾ ನಮ್ಮಣ್ಣನನ್ನು ಹಿಂಬಾಲಿಸಿದೆ. ಅವನು ನನಗೆ ಏನಾಯಿತೋ ಎಂಬ ಗಾಬರಿಯಲ್ಲಿ ಹಿಂದಿರುಗಿ ಬರಲು ಹೋದ, ನಾನು ನನಗೆ ಏನೂ ಆಗಿಲ್ಲ, ನೀನು ಬೇಗ ಬೇಗ ಮುಂದೆ ಸಾಗು ಎಂದು ಹೇಳಿ, ಅವನನ್ನು ಸೇರಿಕೊಂಡೆ.

ಮುಂದೆ ಖಾಕಿ ಸಮವಸ್ತ್ರ ಧರಿಸಿದ್ದ ಮತ್ತೊಬ್ಬ ವ್ಯಕ್ತಿ ನಿಂತಿದ್ದ, ಬಹಳ ಗಾಬರಿಯಿಂದಿದ್ದ ಅವನು " ಸಧ್ಯ ಏನೂ ಆಗಲಿಲ್ಲವಾ ನಿಮಗೆ, ಆ ಮುಠ್ಠಾಳ ನಿಮ್ಮನ್ನು ಹೇಗೆ ಬಿಟ್ಟ, ಅದಕ್ಕಾಗಿಯೇ ಅವನನ್ನು ಅಲ್ಲಿ ನಿಲ್ಲಿಸಿದ್ದುದು" ಎಂದ. "ನಮಗೆ ಬೇಗ ಬೇಗ ಹೋಗಿ ಎಂದಷ್ಟೇ ಅವನು ಹೇಳಿದ" ಎಂದು ನಮ್ಮಣ್ಣ ಹೇಳಿದಾಗ, ಅವನನ್ನು ಬೈದುಕೊಳ್ಳುತ್ತಾ "ಎಂತಹ ಅದೃಷ್ಟ ನಿಮ್ಮದು, ನೀವು ಪಾರಾಗಿ ಬಂದಿರುವುದು ಪವಾಡವೇ ಸರಿ, ರಸ್ತೆ ಅಗಲ ಮಾಡುವುದಕ್ಕಾಗಿ ಅಲ್ಲಿ ಡೈನಮೈಟ್ ಇಟ್ಟಿದ್ದೆವು", ಎಂದ. ನನಗೆ ನಮ್ಮಣ್ಣನಿಗೆ ಮಾತೇ ಹೊರಡದೆ, ಮೂಕರಂತೆ ಬಂದು ಗೂಟಿಯಲ್ಲಿ ಹೋಟೆಲ್ ಸೇರಿಕೊಂಡೆವು. ನಂತರ ನಾನು ನಮ್ಮಣ್ಣನಿಗೆ ಹೇಳಿದೆ, "ನೋಡು ಅಷ್ಟು ದೊಡ್ಡ ಆಸ್ಫೋಟವಾದರೂ, ನಮ್ಮ ಮೈಗೆ ಒಂದು ಕಲ್ಲು ಚೂರು ಕೂಡ ತಾಕಲಿಲ್ಲ, ನಮ್ಮ ಮೇಲಿರುವ ಎಲ್ಲರ ಹಾರೈಕೆಯ ಫಲ ಇದು" ಎಂದು. ನಮ್ಮಣ್ಣ ಹೌದೆಂದು ತಲೆಯಾಡಿಸಿದ. ಅಂದು ರಾತ್ರಿ ಇಬ್ಬರೂ ಬಹಳ ಭಾವುಕರಾಗಿದ್ದೆವು.

ಪೋಲೀಸರ ಆತಿಥ್ಯ: ಮೂರನೇಯ ದಿನ ಪೆಬ್ಬೇರ್ ಎಂಬ ಊರಲ್ಲಿ ಪ್ರಯಾಣ ನಿಲ್ಲಿಸಿದ್ದೆವು. ಸಾಕಷ್ಟು ದೊಡ್ಡ ಊರಾದರೂ, ಇಳಿದುಕೊಳ್ಳಲು ಹೋಟೆಲ್ಲಳಿರಲಿಲ್ಲ. ಸರಿ ಪೋಲೀಸರ ಸಹಾಯ ಕೇಳೋಣವೆಂದು ನನ್ನಣ್ಣ, ಸಹಾಯವಿರಲಿ ಅವರ ಸಹವಾಸವೇ ಬೇಡವೆಂದು ನಾನು. ಆಗ ಆಂಧ್ರದಲ್ಲಿ ನಕ್ಸಲೀಯರ ಹಾವಳಿಯಿಂದಾಗಿ ಅಪರಿಚಿತರೆಲ್ಲರ ಮೇಲೂ ಪೋಲೀಸರಿಗೆ ಸಂಶಯ. ಆದರೆ ನಮ್ಮ ಬಳಿ ಬೆಂಗಳೂರಿನ ಪೋಲೀಸ್ ಕಮೀಶನರ್ ಬಳಿ ಪಡೆದ ಗುರುತಿನ ಪತ್ರವೊಂದಿತ್ತು. ಅಂದು ರಾತ್ರಿ ನಮಗೆ ಸ್ಟೇಷನ್ನಿನಲ್ಲೇ ನಿದ್ದೆಯ ಯೋಗ. ಕಡತಗಳೇ ತಲೆ ದಿಂಬಾಗಿ, ಖಾಕಿ ಕೋಟುಗಳು ಹೊದ್ದಿಕೆಯಾಗಿ, ಕಲ್ಲು ಚಪ್ಪಡಿಯ ನೆಲವೇ ಸುಪ್ಪತ್ತಿಗೆಯಾಗಿ, ಸೊಳ್ಳೆಗಳ ಸಂಗೀತ, ರಾತ್ರಿ ಪಾಳಿಯ ಪೋಲೀಸರ ಆರ್ಭಟದಲ್ಲಿ ನಿದ್ದೆ ಕನಸಾಗಿತ್ತು. ಬೆಳಗ್ಗೆ ಕಾಫಿ ಕೊಟ್ಟು ಕಳುಹಿಸಿಕೊಟ್ಟಾಗ,ಅವರ ಬಗೆಗಿನ ನನ್ನ ಅಭಿಪ್ರಾಯ ಬದಲಿಸಿಕೊಳ್ಳಬೇಕಾಯ್ತು.

ಹಿಂತಿರುಗುವ ಯೋಚನೆ: ನಾಲ್ಕನೇ ದಿನ ಬೆಳಗ್ಗೆ ನನಗೆ ಕಾಲು ನೋವು ಕಾಣಿಸಿಕೊಳ್ಳತೊಡಗಿತ್ತು. ಒಂದೆರಡು ಮೈಲಿಗಳಷ್ಟು ಹೋಗುವಷ್ಟರಲ್ಲೇ ಸೈಕಲ್ ತುಳಿಯುವದಿರಲಿ ಕಾಲುಗಳನ್ನು ಎತ್ತಿಡುವುದೇ ಕಷ್ಟವಾಗತೊಡಗಿತು. ಸರಿ ಸೈಕಲ್ಲನ್ನು ತಳ್ಳಿಕೊಂಡಾದರೂ ಹೋಗೋಣವೆಂದು ಪ್ರಯತ್ನಿಸಿದರೆ, ಒಂದೋಂದು ಹೆಜ್ಜೆ ಇಟ್ಟಾಗಲೂ ಮೀನಖಂಡಗಳಲ್ಲಿ ಪ್ರಾಣ ಹೋಗುವಂತಹ ನೋವು, ಹೆಜ್ಜೆ ಎತ್ತಲೇ ಆಗದು. ನಾನು ಗಣೇಶನಿಗೆ " ನಾನು ನಿನ್ನ ಜೊತೆ ಬರಲೇ ಬಾರದಿತ್ತು, ನೀನೊಬ್ಬನೇ ಆರಾಮವಾಗಿ ಹೋಗಿಬರಬಹುದಿತ್ತು" ಎಂದೆ. ಅದಕ್ಕವನು "ಏನಾಗೋಲ್ಲ ಬಾ, ಇವತ್ತೊಂದು ದಿನ ನೋಡೋಣ" ಎಂದ. "ಹಾಗಾದರೆ ಯಾವುದಾದರೂ ಲಾರಿಯಲ್ಲಿ ಸೈಕಲ್ ಹಾಕಿಕೊಂಡು ಮುಂದಿನ ಊರಿಗೆ ಹೋಗಿರುತ್ತೇನೆ, ನೀನು ಸೈಕಲ್ಲಿನಲ್ಲೇ ಬಾ" ಎಂದೆ. ಆದರೆ ನಮ್ಮ ದುರಾದೃಷ್ಟಕ್ಕೆ ಅವತ್ತು 'ಮೋಹನ ರಂಗಾರಾವ್' ಎಂಬ ರಾಜಕೀಯ ವ್ಯಕ್ತಿಯ ಮರಣದಿಂದಾಗಿ ಇಡೀ ಆಂಧ್ರ ಬಂದ್. ರಸ್ತೆಗಳು, ಊರುಗಳು ಬಿಕೋ ಎನ್ನುತ್ತಿದ್ದವು. ಹಸಿವು, ಬಾಯಾರಿಕೆಯಾಗಿ, ತಿನ್ನಲು ಕುಡಿಯಲು ಕೂಡ ಏನೂ ಇಲ್ಲ. ನನ್ನನ್ನೂ ಎಳೆದುಕೊಂಡು ನನ್ನಣ್ಣ ಬಸವನ ಹುಳುವಿನಂತೆ ಮುಂದೆ ಸಾಗಿದ.

ಇಂತಹವರೂ ಇದ್ದಾರೆ: ರಸ್ತೆ ಬದಿಯಲ್ಲಿ ಒಂದು ಸರ್ಕಾರಿ ಆಸ್ಪತ್ರೆ ಕಾಣಿಸಿತು, ಯಾರಾದರೂ ಡಾಕ್ಟರ್ ಇರುತ್ತಾರಾ ನೋಡೋಣ ಎಂದುಕೊಂಡು, ಅನುಮಾನದಲ್ಲೇ ಒಳ ನಡೆದೆವು. ಇಡೀ ಆಸ್ಪತ್ರೆಗೆ ಒಬ್ಬರೇ ಯುವಕ, ಡಾಕ್ಟರ್ ಎಂಬ ಫಲಕದ ಹಿಂದೆ ಕುಳಿತಿದ್ದು, ನಮ್ಮನ್ನು ನೋಡಿದ ಕೂಡಲೇ ಬನ್ನಿ ಬನ್ನಿ ಎಂದು ಸ್ವಾಗತಿಸಿದರು. ನನ್ನ ಕಾಲುನೋವಿನ ಕಥೆಯನ್ನೆಲ್ಲಾ ತಾಳ್ಮೆಯಿಂದ ಆಲಿಸಿ, ಬಹಳ ದಿನಗಳ ನಂತರ ನೀವು ಒಂದೇಸಲಕ್ಕೆ ಇಷ್ಟು ದೂರ ಸೈಕಲ್ ತುಳಿದಿರುವುದರಿಂದ ಹೀಗಾಗಿದೆ ಅಷ್ಟೇ, ಬೇರೇನೂ ತೊಂದರೆಯಿಲ್ಲ, ಎಂದು ಹೇಳಿ, ಒಂದು ಬಿ ಕಾಂಪ್ಲೆಕ್ಸ್ ಚುಚ್ಚುಮದ್ದು ನೀಡಿದರು. ನಂತರ ಇಬ್ಬರಿಗೂ ಬಿಸಿಬಿಸಿ ಕಾಫಿ ನೀಡಿ, ಒಂದು ಶೀಶೆಯ ತುಂಬಾ ಬಿ ಕಾಂಪ್ಲೆಕ್ಸ್ ಮಾತ್ರೆಗಳು, ಒಂದು ಹಿಡಿ ಎಳಚೆ ಹಣ್ಣುಗಳನ್ನು ನೀಡಿ, ಏನೂ ಯೋಚನೆ ಮಾಡಬೇಡಿ, ನಿಮ್ಮ ಮುಂದಿನ ಪ್ರಯಾಣ ಸುಖಕರವಾಗಿ ನಡೆಯುತ್ತದೆ ಎಂದರು. ಅವರಿಗೆ ಹಣ ನೀಡಲು ಹೋದಾಗ, ಛೆ, ಛೆ, ಇದೇನಿದು, ಇದೊಂದು ಸರ್ಕಾರಿ ಆಸ್ಪತ್ರೆ, ನಾನು ಇಲ್ಲಿನ ನೌಕರ, ನಾನು ಇಲ್ಲಿ ಸಂಬಳ ಪಡೆಯುತ್ತೇನೆ, ಎಂದಾಗ ನಾವಿಬ್ಬರೂ ಬೆರಗಾಗಿ, ಹೃದಯ ತುಂಬಿ ಬಂದಿತ್ತು. ಅವರಿಗೆ ವಂದನೆ ಸಲ್ಲಿಸಿ, ಮೂಕರಂತೆ ಹೊರನಡೆದೆವು.

ಮರೆಯಲಾಗದ ಮೃಷ್ಟಾನ್ನ ಭೋಜನ : ಅಂತೂ ಇಂತೂ ಅವತ್ತು ಹರಸಾಹಸದಿಂದ ಸುಮಾರು 75 ಕಿ.ಮೀ.ಪ್ರಯಾಣ ಮಾಡಿ ಜಡಚರ್ಲ ಎಂಬ ಊರು ತಲುಪಿ ಒಂದು ವಸತಿ ಗೃಹ ಹಿಡಿದೆವು. ಆದರೆ ಆಂಧ್ರ ಬಂದ್ ಪ್ರಯುಕ್ತ ಊಟದ ಹೋಟಲ್ ಗಳೆಲ್ಲಾ ಬಂದ್, ಹೊಟ್ಟೆ ತಾಳ ಹಾಕುತ್ತಿತ್ತು. ಪಕ್ಕದ ರೂಮಿನಲ್ಲಿದ್ದವರು ಅಲ್ಲಿದ್ದ ಒಂದು ಮೆಸ್ ನ ಬಗ್ಗೆ ತಿಳಿಸಿ ಪುಣ್ಯ ಕಟ್ಟಿಕೊಂಡರು. ಈ ಕಾಲುನೋವಿನ ಕಥೆಯಿಂದಾಗಿ ನಮಗೆಷ್ಟು ಹಸಿವಾಗಿತ್ತೆಂದರೆ, ಆ ಮೆಸ್ ಗೆ ಲಗ್ಗೆ ಹಾಕಿ, ಅಲ್ಲಿದ್ದಷ್ಟೂ ಚಿತ್ರಾನ್ನ ಕಬಳಿಸಿದೆವು, ಹಸಿವು ಇಂಗಲಿಲ್ಲ. ಇನ್ನೂ ಬೇಕು ಎಂದಾಗ, ಬಡಿಸುತ್ತಿದ್ದ ಹುಡುಗ ಮುಗಿದು ಹೋಯಿತು ಎಂದ. ಆಗ ಮನೆಯಾಕೆ ಬಂದು, ಮುಗಿಯಿತು ಎನ್ನಬಾರದಪ್ಪ ಎಂದು ಅವನಿಗೆ ಹೇಳಿ ಮತ್ತಷ್ಟು ಚಿತ್ರಾನ್ನ ಕಲಸಿ ತಂದು ಬಡಿಸಿದರು, ಜೊತೆಗೆ ಗಟ್ಟಿ ಮೊಸರು, ಉಪ್ಪಿನಕಾಯಿ. ಅಂದು ನಾವು ತಿಂದ ಊಟ, ನಮ್ಮ ಬದುಕಿನಲ್ಲಿ ಎಂದೂ ಮರೆಯಲಾಗದ ಮೃಷ್ಟಾನ್ನ ಭೋಜನ. ನಂತರ ನನ್ನಣ್ಣ ನನ್ನ ಕಾಲಿಗೆ ಅಮೃತಾಂಜನ, ವಿಕ್ಸ್ ಗಳಿಂದ ಆರೈಕೆ ಮಾಡಿ, ಒಂದೆರಡು ಸುಲಭವಾದ ಕಾಲಿನ ವ್ಯಾಯಾಮ ಹೇಳಿಕೊಟ್ಟ. ಮುಂದಿನ ಪ್ರಯಾಣದಲ್ಲಿ ಮತ್ತೆಂದೂ ಕಾಲುನೋವು ಕಾಡಲಿಲ್ಲ. ಅಣ್ಣನ ಸೇವೆ, ದೇವರಂತೊದಗಿದ ಡಾಕ್ಟರ್, ನೋವು, ಹಸಿವಿನ ಸಂಕಟ ನೀಗಿಸಿದ ಆ ಭೋಜನ, ಈ ಅನುಭವಗಳು ಸೈಕಲ್ ಪ್ರವಾಸ ಏಕೆ ಮಾಡಬೇಕು ಎಂಬುದಕ್ಕೆ ಉತ್ತರವಾಗಬಹುದು.

ಮುಂದಿನ ಸಂಚಿಕೆಯಲ್ಲಿ: ಮುಂದೆ ಕಾಣುತ್ತಿದ್ದ ಭವ್ಯ ಅರಮನೆಯನ್ನೇ ನೋಡುತ್ತ, ಹಿಂದೊಮ್ಮೆ ಅದು ಕಂಡಿರಬಹುದಾದ, ವೈಭವ, ಅಲ್ಲಿದ್ದಿರಬಹುದಾದ ದರ್ಪ, ಮುಂತಾದವುಗಳನ್ನು ಊಹಿಸಿಕೊಳ್ಳುತ್ತಾ ಮುಂದೆ ಸಾಗುತ್ತಿದ್ದಂತೆ ನನ್ನ ಎರಡು ಚಕ್ರದ ರಥ ಮುಂದಕ್ಕೆ ಮುಗ್ಗರಿಸಿ, ನಾನು ಕೆಳಕ್ಕೆ ಬೀಳುವಂತಾಯಿತು....

ಬ್ಲಾಗ್ ಲೋಕ

ಓದಲು ಚಿತ್ರದ ಕೆಳಗಿರುವ ಲಿಂಕ್ ಕ್ಲಿಕ್ ಮಾಡಿ

ಕನಕಾಪುರ ನಾರಾಯಣ

ಇವರ "ಚಕ್ಕೆ ಮೊಗ್ಗು"

ಸುದರ್ಶನ್. ಏನ್

ಇವರ "ಅನಿವಾಸಿ"



ಬದರಿ ತ್ಯಾಮಗೊಂಡ್ಲು

ಇವರ "ಕಾವ್ಯ ಕಸ್ತೂರಿ"

ಸ್ಮಿತಾ ಮೇಲ್ಕೋಟೆ

ಇವರ "ಮಂದಹಾಸ"

ಛಾಯಾ ಚಿಲುಮೆ – ಕ್ಲಿಕ್ ಕ್ಲಿಕ್ ಕ್ಲಿಕ್

ನೀವು ತೆಗೆದ ಚಿತ್ರ ಇಲ್ಲಿ ಕಾಣಬೇಕೇ

ಇ-ಮೇಲ್ ಮಾಡಿ: horanadachilume@gmail.com

"ಸುಗಮ ಕನ್ನಡ ಕೂಟ" ದಲ್ಲಿ ನಡೆದ ದಸರಾ ಮತ್ತು ರಾಜ್ಯೋತ್ಸವ ಕಾರ್ಯಕ್ರಮದ ಛಾಯಾಚಿತ್ರಗಳು

ಜಾಣ ಕರ್ನಾಟಕ – ಉತ್ತರ

೧. ಸರ್. ಎಂ. ವಿಶ್ವೇಶ್ವರಯ್ಯನವರು, 1915 ರಲ್ಲಿ. ಹೆಚ್. ವಿ. ನಂಜುಂಡಯ್ಯ.

೨ 80ನೇ ಸಮ್ಮೇಳನ, ಮಡಿಕೇರಿ

ವಿಜ್ಞಾನ

ತೇಲುವ ಮೊಟ್ಟೆ

ಸಂಕಲನ: ಬದರಿ ತ್ಯಾಮಗೊಂಡ್ಲು

ಇಸ್ರೇಲ್ ಬಳಿ ಇರುವ ಮೃತ ಸಮುದ್ರದ (Dead Sea) ಬಗ್ಗೆ ಕೇಳಿದ್ದೀರಲ್ಲವೇ? ಈ ಸರೋವರದಲ್ಲಿ ನೀವು ಈಜದೇ ತೇಲಬಲ್ಲಿರಿ! ಆಶ್ಚರ್ಯವೇ.

ಇದರ ರಹಸ್ಯ ತಿಳಿಯಲು ಈ ಪ್ರಯೋಗ ಮಾಡೋಣ ಬನ್ನಿ.

ಬೇಕಾಗುವ ಸಾಮಾನು:

ಎರಡು ಗಾಜಿನ ಲೋಟಗಳು, ಎರಡು ಮೊಟ್ಟೆಗಳು, ಐದಾರು ಚಮಚ ಅಡುಗೆ ಉಪ್ಪು,

ವಿಧಾನ

ಎರಡು ಲೋಟಕ್ಕೂ ಕುಡಿಯುವ ನೀರನ್ನು ತುಂಬಿ. ಒಂದು ಲೋಟಕ್ಕೆ ಐದಾರು ಚಮಚ ಉಪ್ಪನ್ನು ಹಾಕಿ ಕದಡಿ.

ಇರುವ ಎರಡು ಮೊಟ್ಟೆಯನ್ನು ನಿಧಾನವಾಗಿ ಒಂದೊಂದು ಲೋಟಕ್ಕೆ ಹಾಕಿ ಏನಾಗುವುದೆಂದು ಗಮನಿಸಿ.

ಶುದ್ಧ ನೀರಿರಿರುವ ಲೋಟದಲ್ಲಿ ಹಾಕಿದ ಮೊಟ್ಟೆ ತಳ ಸೇರುವುದು. ಉಪ್ಪಿನ ನೀರಿನ ಲೋಟದಲ್ಲಿ ಹಾಕಿದ ಮೊಟ್ಟೆ ತಳ ಸೇರದೆ ತೇಲುವುದು

ರಹಸ್ಯ

ಯಾವುದೇ ವಸ್ತು ಮುಳುಗಬೇಕಾದರೆ ಅದರ ಸಾಂದ್ರತೆ (Density) ಹೆಚ್ಚಿರಬೇಕು. ಮೊಟ್ಟೆಯ ಸಾಂದ್ರತೆ ಶುದ್ಧ ನೀರಿನ ಸಾಂದ್ರತೆಗಿಂತ ಜಾಸ್ತಿ. ಹೀಗಾಗಿ ಮುಳುಗತ್ತದೆ. ಆದರೆ, ನೀರಿಗೆ ಉಪ್ಪು ಬೆರೆಸುತ್ತಾ ಹೋದಂತೆ, ನೀರಿನ ಸಾಂದ್ರತೆ ಮೊಟ್ಟೆಯ ಸಾಂದ್ರತೆಗಿಂತ ಹೆಚ್ಚಾಗುತ್ತಾ ಹೋಗುತ್ತದೆ. ಈ ಕಾರಣದಿಂದ ಉಪ್ಪುನೀರಿನಲ್ಲಿ ಹಾಕಿದ ಮೊಟ್ಟೆ ತೇಲುತ್ತದೆ.

ಅಲ್ಲಲ್ಲಿ ಏನೇನು

ನಿಮ್ಮ ಕಾರ್ಯಕ್ರಮವಿದ್ದರೆ ತಿಳಿಸಿ - horanadachilume@gmail.com

ಸಿಡ್ನಿ ಕನ್ನಡ ಶಾಲೆ ಆಶ್ರಯದಲ್ಲಿ

2013 – Kannada School Annual Day

Wattle Grove Public School, Cressbrook Dr, Wattle Grove NSW 2173

ದಿನಾಂಕ 21-Dec-2013 ಸಂಜೆ 5.30 ಕ್ಕೆ

ENTRY FREE – Light Refreshments Provided

ಕನ್ನಡ ಶಾಲೆಯ ಪುಟ್ಟ ಮಕ್ಕಳಿಂದ ಮನರಂಜನೆ , ಅತ್ಯುತ್ತಮ ವಿದ್ಯಾರ್ಥಿಗಳಿಗೆ ಸನ್ಮಾನ, ಶಾಲೆಯ ವಾರ್ಷಿಕ ವರದಿ.

Vedanta Centre of Sydney

Elocution, quiz, essay competitions, skit
12 January 2014
8:00 AM

Vedanta Centre of Sydney, 2 Stewart Street, Ermington, NSW 2115

Contact: (02) 8197 7351, vedasydney@gmail.com, www.vedantasydney.org

Christmas Lights Spectacular

Hunter Valley Gardens
2090 Broke Rd, Pokolbin NSW 2320

ON NOW - 26 January 2014 from 6.30pm
Open every night (except Christmas Day), a magical event the whole family will enjoy! With exciting new displays of 1.5 MILLION CHRISTMAS LIGHTS plus festive food, beverages, Children's entertainment and Santa!
More Info : www.hvg.com.au

ನಮ್ಮ

ಸುತ್ತಾ

ಮುತ್ತಾ

Chinmaya Mission Australia

Geeta Jayanthi
Lecture by Swami Tapovanji Maharaj

Date : 12th of Dec 2013
Start Time : From 6:30pm

Venue : 2 Eric Cooper Drive, Castle Hill
(Parking on the street)

www.chinmaya.com.au

ಈ ಸಂಚಿಕೆ ನಿಮಗಾಗಿ ತಂದವರು – ಸುಗಮ ಕನ್ನಡ ಕೂಟ – ಸಿಡ್ನಿ, ಆಸ್ಟ್ರೇಲಿಯಾ

ವಿನ್ಯಾಸ ಮತ್ತು ಮುಖ್ಯ ಸಂಪಾದಕರು – ಬದರಿ ತ್ಯಾಮಗೊಂಡ್ಲು ~ ಸಂಕಲನ – ವೀಣಾ ಸುದರ್ಶನ್, ರಾಜಲಕ್ಷ್ಮಿ ನಾರಾಯಣ

ಸಲಹಾ ಸಮಿತಿ –ಕನಕಾಪುರ ನಾರಾಯಣ, ನಾಗೇಂದ್ರ ಅನಂತಮೂರ್ತಿ

ಸೂಚನೆ: ಈ ಸಂಚಿಕೆಯಲ್ಲಿ ಪ್ರಕಟವಾಗಿರುವ ಎಲ್ಲ ವಿಷಯಗಳು ವಿವಿಧ ಲೇಖಕರ ಅನಿಸಿಕೆಗಳು. ಯಾವುದೇ ಅನಾನುಕೂಲವಾದಲ್ಲಿ "ಸುಗಮ ಕನ್ನಡ ಕೂಟ" ಅಥವಾ ಅದಕ್ಕೆ ಸಂಬಂಧಿಸಿದ ವ್ಯಕ್ತಿಗಳು ಜವಾಬ್ದಾರರಲ್ಲ. ಈ ಸಂಚಿಕೆಯಲ್ಲಿ ಪ್ರಕಟವಾದ ಎಲ್ಲ ಸುದ್ದಿ ಮಾಹಿತಿ, ಚಿತ್ರಗಳ ಹಕ್ಕುಗಳು ಸ್ಪಷ್ಟವಾಗಿ ಉಲ್ಲೇಖಿಸಿರದಿದ್ದರೆ ಅದು ಸುಗಮ ಕನ್ನಡ ಕೂಟಕ್ಕೆ ಸೇರಿದೆ.
ಸಂಚಿಕೆಯಲ್ಲಿ ಬಳಸಿದ ಹಲವು ಚಿತ್ರಗಳು ಅಂತರ್ಜಾಲದಿಂದ ಪಡೆದದ್ದು. ಅದರ ಎಲ್ಲ ಹಕ್ಕೂ ಅದರದರ ಕರ್ತೃಗಳಿಗೆ ಸೇರಿದ್ದು.